ಸುವರ್ಣ ಕರ್ನಾಟಕ



# ಕರ್ನಾಟಕ ರಾಜ್ಯ ಸಾವಯವ ಕೃಷಿ ನೀತಿ

# ಕರ್ನಾಟಕ ಅಂಕಿ ಅಂಶಗಳ ನೋಟ

| | |
|---|---|
| 1. ಜಿಲ್ಲೆಗಳು | 27 |
| 2. ಕಂದಾಯ ಉಪ ವಿಭಾಗಳು | 49 |
| 3. ತಾಲ್ಲೂಕುಗಳು | 176 |
| 4. ಹೋಬಳಿಗಳು | 745 |
| 5. ಗ್ರಾಮ ಪಂಚಾಯಿತಿಗಳು | 5,692 |
| 6. ಗ್ರಾಮ | 29,406 |
| **ಜನಸಂಖ್ಯೆ (2001)** | (ಕೋಟಿಗಳಲ್ಲಿ) |
| ಒಟ್ಟು ಜನಸಂಖ್ಯೆ | 5.28 |
| ಗ್ರಾಮೀಣ ಜನಸಂಖ್ಯೆ | 3.49 |
| ನಗರ ಜನಸಂಖ್ಯೆ | 1.79 |
| ಪುರುಷರ ಸಂಖ್ಯೆ | 2.69 |
| ಮಹಿಳೆಯರ ಸಂಖ್ಯೆ | 2.59 |
| ಜನಸಂಖ್ಯೆ ಸಾಂದ್ರತೆ (ಪ್ರತಿ ಚದರ ಕಿ.ಮೀ.ಗೆ ಇರುವ ಜನರು) | 275 |
| ಸಾಕ್ಷರತೆ ಪ್ರಮಾಣ (%) | 67 |
| ಒಟ್ಟು ಕೆಲಸಗಾರರು | 2.35 |
| ಸಾಗುವಳಿದಾರರು | 0.688 |
| ಕೃಷಿ ಕಾರ್ಮಿಕರು | 0.623 |
| **ಭೂಬಳಕೆ (2002-03)** | (000 ಹೆ..) |
| ಭೌಗೋಳಿಕ ವಿಸ್ತೀರ್ಣ | 19,050 |
| ಅರಣ್ಯ | 3,078 |
| ವ್ಯವಸಾಯೇತರ | 1,332 |
| ಬಂಜರು ಮತ್ತು ಸಾಗುವಳಿ ಯೋಗ್ಯವಲ್ಲದ ಪ್ರದೇಶ | 788 |
| ಸಾಗುವಳಿ ಯೋಗ್ಯ ಬಂಜರು | 421 |
| ಕಾಯಂ ಗೋಮಾಳ ಮತ್ತು ಇತರೆ ಹುಲ್ಲುಗಾವಲು ಪ್ರದೇಶ | 952 |
| ಇತರೆ ವೃಕ್ಷ, ಬೆಳೆ ಮತ್ತು ತೋಪುಗಳು | 305 |
| ಚಾಲ್ತಿ ಬೀಳು ಭೂಮಿ | 1,832 |
| ಇತರೆ ಚಾಲ್ತಿ ಬೀಳು ಭೂಮಿ | 513 |
| ನಿವ್ವಳ ಬಿತ್ತನೆ ಪ್ರದೇಶ | 9,838 |
| ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾದ ಪ್ರದೇಶ | 1,694 |
| ಒಟ್ಟು ಬಿತ್ತನೆಯಾದ ಪ್ರದೇಶ | 11,552 |
| ನಿವ್ವಳ ನೀರಾವರಿಯಾದ ಪ್ರದೇಶ | 2,450 |
| ಬೆಳೆ ಸಾಂದ್ರತೆ (%) | 117.22 |

| **ಭೂ ಹಿಡುವಳಿಗಳು ಮತ್ತು ವಿಸ್ತೀರ್ಣ (2000-01)** | (ಸಾವಿರಗಳಲ್ಲಿ) |
|---|---|
| ಅತಿ ಸಣ್ಣ ರೈತರು (<1ಹೆ.) | 3,252 |
| ವಿಸ್ತೀರ್ಣ (ಹೆ. ಗಳಲ್ಲಿ) | 1,492 |
| ಸಣ್ಣ ರೈತರು (1-2 ಹೆ.) | 1,909 |
| ವಿಸ್ತೀರ್ಣ (ಹೆ. ಗಳಲ್ಲಿ) | 2,742 |
| ಅರೆ ಮಧ್ಯಮದಿಂದ ದೊಡ್ಡ ರೈತರು (2 ಹಾಗೂ 2ಕ್ಕಿಂತ ಹೆಚ್ಚು ಹೆ.). | 1,918 |
| ವಿಸ್ತೀರ್ಣ (ಹೆ. ಗಳಲ್ಲಿ) | 8,073 |
| **ಇತರೆ ಮಾಹಿತಿ** | (ಸಂಖ್ಯೆಗಳಲ್ಲಿ) |
| • ಕೈಗಾರಿಕೆಗಳು | 9,625 |
| • ಸಕ್ಕರೆ ಕಾರ್ಖಾನೆಗಳು | 33 |
| **ಸಾಲ ನೀಡುವ ಸಂಸ್ಥೆಗಳು** | |
| • ಬ್ಯಾಂಕುಗಳು | 3,710 |
| • ಸಹಕಾರಿ ಬ್ಯಾಂಕುಗಳು | 5,979 |
| • ವ್ಯವಸಾಯ ಸಾಲ ಸಹಕಾರ ಸಂಸ್ಥೆಗಳು | 5,023 |
| • ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು | 177 |
| • ನಿಯಂತ್ರಿತ ಮಾರುಕಟ್ಟೆಗಳು | 487 |
| **ಶಿಕ್ಷಣ ಸಂಸ್ಥೆಗಳು** | |
| • ಪ್ರಾಥಮಿಕ ಶಾಲೆಗಳು | 51,263 |
| • ಪ್ರೌಢ ಶಾಲೆಗಳು | 8,731 |
| • ಕಾಲೇಜುಗಳು | 2,689 |
| • ವಿಶ್ವವಿದ್ಯಾಲಯಗಳು | 16 |
| **ವೈದ್ಯಕೀಯ** | |
| • ಆಸ್ಪತ್ರೆಗಳು | 335 |
| • ಪ್ರಾಥಮಿಕ ಆರೋಗ್ಯ ಕೇಂದ್ರಗಳು | 1696 |
| • ಪ್ರಾಥಮಿಕ ಆರೋಗ್ಯ ಘಟಕಗಳು | 581 |
| • ಪಶು ವೈದ್ಯಾಲಯ | 294 |
| • ಪಶು ಔಷಧಾಲಯಗಳು | 1,451 |
| • ಪ್ರಾಥಮಿಕ ಪಶು ಆರೋಗ್ಯ ಕೇಂದ್ರಗಳು | 1,456 |
| • ಸಂಚಾರಿ ಪಶು ಔಷಧಾಲಯಗಳು | 173 |
| • ಕೃತಕ ಗರ್ಭಧಾರಣ ಕೇಂದ್ರಗಳು | 400 |

**ಮೂಲಭೂತ ಸೌಕರ್ಯಗಳು**

- ☆ ರಾಷ್ಟ್ರೀಯ ಹೆದ್ದಾರಿ: 3,728 ಕಿ.ಮೀ.
- ☆ ರಾಜ್ಯ ಹೆದ್ದಾರಿ: 9,829 ಕಿ.ಮೀ.
- ☆ ರೈಲ್ವೆ ಮಾರ್ಗಗಳ ಉದ್ದ: 3,170 ಕಿ.ಮೀ.
- ☆ ಮುಖ್ಯ ಬಂದರುಗಳು: ಕಾರವಾರ ಮತ್ತು ಮಂಗಳೂರು
- ☆ ಕೃಷಿ ಉತ್ಪನ್ನ ಮಾರುಕಟ್ಟೆಗಳು: 141 ಮತ್ತು 342 ಉಪ ಮಾರುಕಟ್ಟೆಗಳು
- ☆ 101 ಕೇಂದ್ರೀಯ ಉಗ್ರಾಣಗಳು, 19 ರಾಜ್ಯ ಉಗ್ರಾಣಗಳು ಮತ್ತು 8 ಖಾಸಗಿ ಉಗ್ರಾಣಗಳು
- ☆ ಉಗ್ರಾಣಗಳ ಒಟ್ಟು ಸಂಗ್ರಹಣಾ ಸಾಮರ್ಥ್ಯ 10.72 ಲಕ್ಷ ಘನ ಮೀ.

*(3ನೇ ರಕ್ಷಾ ಪುಟಕ್ಕೆ)*

# ಕರ್ನಾಟಕ ರಾಜ್ಯ ಸಾವಯವ ಕೃಷಿ ನೀತಿ

## Organic Farming Policy



# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ : ಕರ್ನಾಟಕ ರಾಜ್ಯ ಸಾವಯವ ಕೃಷಿ ನೀತಿ**

**ಓದಲಾಗಿದೆ :** ದಿನಾಂಕ 13-02-2004ರ ಪತ್ರ ಸಂಖ್ಯೆ : ಕೃಆ/ಸಕೃಘ/ಸಕೃನಿ/03-04
ಕೃಷಿ ಆಯುಕ್ತರು, ಬೆಂಗಳೂರು ಇವರಿಂದ.

ಪ್ರಸ್ತಾವನೆ :

ಸಾವಯವ ಕೃಷಿಯು ಒಂದು ಪರಿಪೂರ್ಣ ವ್ಯವಸ್ಥೆಯಾಗಿದ್ದು, ಇದರಲ್ಲಿನ ಪ್ರಕ್ರಿಯೆಗಳು ಸುಸ್ಥಿರ ಪರಿಸರ, ಸುರಕ್ಷಿತ, ಆರೋಗ್ಯಕರ ಹಾಗೂ ಪೌಷ್ಠಿಕ ಆಹಾರ, ಪ್ರಾಣಿಗಳ ಕ್ಷೇಮ ಮತ್ತು ಸಾಮಾಜಿಕ ನ್ಯಾಯ ಸಾಧಿಸುವಲ್ಲಿನ ವ್ಯವಸ್ಥೆಯಾಗಿದೆ.

ಮಣ್ಣು, ಸಸ್ಯಗಳು ಮತ್ತು ಮಾನವಕುಲ ಇವುಗಳು ಒಂದನ್ನೊಂದು ಅವಲಂಬಿತವಾಗಿದ್ದು ಇವುಗಳ ಆರೋಗ್ಯ ಮತ್ತು ಉತ್ಪಾದಕತೆಯಲ್ಲಿ ಸಮತೋಲನ ಕಾಪಾಡುವುದು ಸಾವಯವ ಕೃಷಿಯ ಮೂಲ ಉದ್ದೇಶವಾಗಿರುತ್ತದೆ.

ವಿಶ್ವದಾದ್ಯಂತ ಪ್ರಮಾಣೀಕೃತ ಸಾವಯವ ಕೃಷಿ ಕ್ಷೇತ್ರವು ಶೇಕಡಾ 1ಕ್ಕಿಂತ ಕಡಿಮೆ ಇದ್ದು ಸಾವಯವ ಕೃಷಿ ಉತ್ಪನ್ನಗಳ ವಹಿವಾಟು ಶೇಕಡಾ 1 ರಿಂದ 2 ಇರುತ್ತದೆ. ಆದರೆ ಸಾವಯವ ಕೃಷಿ ಉತ್ಪಾದನಾ ಕ್ಷೇತ್ರವು ಪ್ರಸ್ತುತ ದಶಕದಲ್ಲಿ ತೀವ್ರಗತಿಯಲ್ಲಿ ಬೆಳವಣಿಗೆ ಹೊಂದಿದ್ದು, ವಾರ್ಷಿಕ ಸಾವಯವ ಕೃಷಿ ಉತ್ಪನ್ನಗಳ ವಹಿವಾಟು ಶೇಕಡ 20-25ರ ದರದಲ್ಲಿ ವೃದ್ಧಿಯಾಗುತ್ತಿದೆ.

ಭಾರತ ದೇಶದಲ್ಲಿ ಸಾವಯವ ಕೃಷಿ ಒಂದು ಜೀವನ ಪದ್ಧತಿಯಾಗಿತ್ತು. ಆದರೆ ಆಹಾರ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಕೃಷಿ ಪರಿಕರಗಳಾದ ರಸಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಲಾಯಿತು. ಈ ರಾಸಾಯನಿಕ ಬಳಕೆಯಿಂದ ಜೀವಿಗಳ ಸ್ವಾಭಾವಿಕ ವಾಸಸ್ಥಾನ ಮತ್ತು ಪ್ರಭೇದಗಳು ನಾಶಗೊಂಡಿರುತ್ತವೆ. ಇಂದು ಸುಸ್ಥಿರ ಕೃಷಿಯನ್ನು ಅಳವಡಿಸಿಕೊಳ್ಳುವ ಅವಶ್ಯಕತೆಯನ್ನು ಗುರುತಿಸಲಾಗಿದ್ದು, ಈ ದಿಶೆಯಲ್ಲಿ ಕೃಷಿ ಇಲಾಖೆಯು ಕರ್ನಾಟಕ ರಾಜ್ಯ ಸಾವಯವ ಕೃಷಿ ನೀತಿಯನ್ನು ರೂಪಿಸಿರುತ್ತದೆ.

ಸಾವಯವ ಕೃಷಿ ನೀತಿಯ ಮೂಲ ಉದ್ದೇಶವೆಂದರೆ ಸುಸ್ಥಿರತೆ ಸಾಧಿಸುವಲ್ಲಿ ರೈತರನ್ನು ಸಜ್ಜುಗೊಳಿಸುವುದು, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದು, ಪರಿಸರ ಸಂರಕ್ಷಿಸಿ ಮಾಲಿನ್ಯರಹಿತವಾಗಿ ಮಾಡುವುದು ಹಾಗೂ ಮಳೆಯಾಶ್ರಿತ ಮತ್ತು ಕ್ಷಾಮಕ್ಕೆ ತುತ್ತಾಗುವ ಪ್ರದೇಶಗಳಲ್ಲಿನ ರೈತರನ್ನು ಬರ ಪರಿಸ್ಥಿತಿಯನ್ನು ನಿಭಾಯಿಸಲು ಸಿದ್ಧಗೊಳಿಸುವುದು. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಾವಯವ ಕೃಷಿ ನೀತಿಯನ್ನು 2004-05ನೇ ಸಾಲಿನಿಂದ ಜಾರಿಗೊಳಿಸಲು ಉದ್ದೇಶಿಸಿದ್ದು, ಅದರಿಂದ ರೈತಾಪಿ ವರ್ಗದವರು ಸಾವಯವ ಕೃಷಿ ಪದ್ಧತಿಯನ್ನು ತಮ್ಮ ಹಿಡುವಳಿಗಳಲ್ಲಿ ಅಳವಡಿಸುವ ಮೂಲಕ ಆಹಾರೋತ್ಪಾದನೆಯನ್ನು ಹೆಚ್ಚಿಸುವಂತೆ ಮಾಡಲು ಉದ್ದೇಶಿಸಲಾಗಿದ್ದು, ಅದಕ್ಕಾಗಿ ಈ ಆದೇಶ.

## ಸರ್ಕಾರಿ ಆದೇಶ ಸಂಖ್ಯೆ : ಕೃತೋಇ 92 ಕೃಉಇ 2004, ಬೆಂಗಳೂರು, ದಿನಾಂಕ: 8ನೇ ಮಾರ್ಚ್ 2004

ಕರ್ನಾಟಕ ರಾಜ್ಯದಲ್ಲಿ 2004-05ನೇ ಸಾಲಿನಿಂದ ಸಾವಯವ ಕೃಷಿ ನೀತಿಯನ್ನು ಜಾರಿಗೊಳಿಸಲು ಸರ್ಕಾರದ ಮಂಜೂರಾತಿಯನ್ನು ಈ ಮೂಲಕ ನೀಡಲಾಗಿದೆ. ಈ ಸಾವಯವ ಕೃಷಿ ನೀತಿಯನ್ನು ಅಳವಡಿಸಿಕೊಳ್ಳಲು ಅನುಸರಿಸಬೇಕಾದ ಕಾರ್ಯ ವಿಧಾನಗಳು:-

1) ವಿವಿಧ ಇಲಾಖೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಸಾವಯವ ಕೃಷಿಗೆ ಸಂಬಂಧಿತ ಯೋಜನೆಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾವಯವ ಕೃಷಿಯನ್ನು ಉತ್ತೇಜಿಸುವುದು (ಏಕ ಗವಾಕ್ಷಿ ಪದ್ಧತಿಯಲ್ಲಿ)

2) ಸ್ಥಳೀಯ ಗುಂಪುಗಳನ್ನು ಪ್ರೋತ್ಸಾಹಿಸುವ ದಿಶೆಯಲ್ಲಿ ಸ್ವಸಹಾಯ ಗುಂಪುಗಳನ್ನು ಉತ್ತೇಜಿಸುವುದು, ರೈತರ ಸಹಕಾರ ಸಂಘ ಮತ್ತು ರೈತರ ಕಂಪನಿ (Farmers' Company) ಗಳನ್ನು ಸ್ಥಾಪಿಸಲು ಅನುವು ಮಾಡುವುದು.

3) ಪ್ರಾರಂಭದಲ್ಲಿ ಪ್ರತಿ ಹೋಬಳಿಯ ಕನಿಷ್ಠ ಒಂದು ಗ್ರಾಮದ 200-500 ಹೆಕ್ಟೇರ್ ಪ್ರದೇಶದಲ್ಲಿ ಸಾವಯವ ಕೃಷಿಯನ್ನು ಉತ್ತೇಜಿಸುವುದು.

4) ಸಾವಯವ ಕೃಷಿಗೆ ಅಗತ್ಯ ಪರಿಕರಗಳನ್ನು ಒದಗಿಸಲು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು.

5) ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು ಸಾವಯವ ಕೃಷಿಗೆ ಸಂಬಂಧಿತ ಸಂಶೋಧನೆಯನ್ನು ಕೈಗೊಳ್ಳುವ ಜವಾಬ್ದಾರಿ ವಹಿಸುವುದು.

6) ಇಲಾಖೆಗಳ ವಿಸ್ತರಣಾ ಸಿಬ್ಬಂದಿಯವರಿಗೆ ಮತ್ತು ರೈತರಿಗೆ ಅದರಲ್ಲೂ ರೈತ ಮಹಿಳೆಯರಿಗೆ ಸಾವಯವ ಕೃಷಿಯಲ್ಲಿ ಹೆಚ್ಚಿನ ತರಬೇತಿ ನೀಡುವುದು.

**ಸಾವಯವ ಕೃಷಿ ನೀತಿಗೆ ಹೆಚ್ಚಿನ ಒತ್ತು ನೀಡಲು ಗುರುತಿಸಲಾಗಿರುವ ಕ್ಷೇತ್ರಗಳು:**

1) ಸಾವಯವ ಗೊಬ್ಬರಗಳ ಉತ್ಪಾದನೆ

2) ಜೀವ ವೈವಿಧ್ಯತೆಗೆ ಉತ್ತೇಜನ, ಕೃಷಿ - ತೋಟಗಾರಿಕೆ-ಅರಣ್ಯ-ಹುಲ್ಲುಗಾವಲು-ಮೇವು ಬೆಳೆಗಳ ಪದ್ಧತಿ

3) ಪಶು ಸಂಗೋಪನೆಗೆ ಆದ್ಯತೆಯಿರುವ ಮಿಶ್ರ ಬೇಸಾಯ ಪದ್ಧತಿ

4) ಮಣ್ಣು ಮತ್ತು ನೀರಿನ ಸಂರಕ್ಷಣೆಯೊಂದಿಗೆ ಮಳೆ ನೀರಿನ ಕೊಯ್ಲು

5) ಮಣ್ಣನ್ನು ಪುನರುಜ್ಜೀವನಗೊಳಿಸುವುದು ಮತ್ತು ಮಣ್ಣಿನ ಫಲವತ್ತತೆಯನ್ನು ವೃದ್ಧಿಸುವುದು.

6) ಸಾವಯವ ಕೃಷಿ ಉತ್ಪನ್ನಗಳ ಸಂಸ್ಕರಣ ಘಟಕಗಳಿಗೆ ಉತ್ತೇಜನ

7) ಸಮರ್ಪಕ ತಪಾಸಣೆ ಮತ್ತು ಪ್ರಮಾಣೀಕರಣ ವ್ಯವಸ್ಥೆ

8) ಸಾವಯವ ಉತ್ಪನ್ನಗಳ ವ್ಯಾಪಕ ಮಾರಾಟ ವ್ಯವಸ್ಥೆ

9) ಸಾವಯವ ಗ್ರಾಮಗಳನ್ನಾಧರಿಸಿ ಪರಿಸರ ಪ್ರವಾಸೋದ್ಯಮ (Eco-tourism)

ಸಾವಯವ ಕೃಷಿ ನೀತಿಯಲ್ಲಿರುವ ವಿವಿಧ ಉಪಘಟಕಗಳನ್ನು ಯೋಜಿಸಲು, ಅನುಷ್ಠಾನಗೊಳಿಸಲು ಮತ್ತು ಉಸ್ತುವಾರಿ ಮಾಡುವ ಸಲುವಾಗಿ ಈ ಕೆಳಕಂಡ ಆಡಳಿತಾತ್ಮಕ ವ್ಯವಸ್ಥೆಯನ್ನು ಮಾಡಲು ಆದೇಶಿಸಲಾಗಿದೆ :-

1) ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿಯ ರಚನೆ (State Level Empowered Committee)

2) ಪ್ರಖ್ಯಾತ ವಿಜ್ಞಾನಿಯೊಬ್ಬರ ಮುಖಂಡತ್ವದಲ್ಲಿ ಸಾವಯವ ಕೃಷಿ ಮಿನಿಮಿಷನ್ ರಚನೆ. ಈ ಮಿನಿಮಿಷನ್ ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿಗೆ ತಾಂತ್ರಿಕ, ಆರ್ಥಿಕ ಮತ್ತು ಉಸ್ತುವಾರಿ ವಿಷಯಗಳಲ್ಲಿ ಸಲಹೆ ನೀಡುವ ಅಂಗವಾಗಿರುತ್ತದೆ.

3) ಕಾರ್ಯ ಯೋಜನೆ ಸಿದ್ಧಪಡಿಸಲು ರೈತರು/ಸ್ವಸಹಾಯ ಸಂಸ್ಥೆಗಳು/ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ವಿಶಿಷ್ಠ ಸ್ಥಳೀಯ ಸಮಿತಿಗಳ ರಚನೆ.

4) ಕೃಷಿ ಇಲಾಖೆಯ ಅಪರ ಕೃಷಿ ನಿರ್ದೇಶಕರೊಬ್ಬರನ್ನು ಸಾವಯವ ಕೃಷಿ ಉತ್ತೇಜನಕ್ಕೆ ಸಂಬಂಧಿಸಿದ ವಿಷಯಗಳ ನಿರ್ವಹಣೆಗಾಗಿ ನಿಯೋಜಿಸುವುದು.

5) ಸಾವಯವ ಕೃಷಿ ನೀತಿ ಮತ್ತು ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಪ್ರಸಾರ ಮಾಧ್ಯಮಗಳ ವ್ಯಾಪಕ ಬಳಕೆ. ಸದಿರಿ ನೀತಿಯಲ್ಲಿ ಒಳಗೊಂಡಿರುವ ಅಂಶಗಳನ್ನು ಕೃಷಿ ಇಲಾಖೆ ಮತ್ತು ಸಂಬಂಧಿತ ಇಲಾಖೆಗಳು ಹಂತಹಂತವಾಗಿ ಜಾರಿಗೊಳಿಸತಕ್ಕದ್ದು. ರಾಜ್ಯದಲ್ಲಿ ಸಾವಯವ ಕೃಷಿ ನೀತಿಯನ್ನು ಜಾರಿಗೊಳಿಸುವ ಸಲುವಾಗಿ ಅಗತ್ಯವಿರುವ ಆರ್ಥಿಕ ನೆರವು ಹಾಗೂ ಇತರೆ ಸವಲತ್ತುಗಳನ್ನು ನೀಡುವ ಬಗ್ಗೆ ಪ್ರತ್ಯೇಕವಾಗಿ ಆದೇಶವನ್ನು ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**(ವಿ. ಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಮತ್ತು ತೋಟಗಾರಿಕೆ ಇಲಾಖೆ

ಇವರಿಗೆ :-

1) ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು

2) ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.

3) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು.

4) ಎಲ್ಲಾ ಜಿಲ್ಲಾಧಿಕಾರಿಗಳು (ಕೃಷಿ ಆಯುಕ್ತರ ಮೂಲಕ)

5) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಕೃಷಿ ಆಯುಕ್ತರ ಮೂಲಕ)

6) ಕೃಷಿ ಆಯುಕ್ತರು, ಬೆಂಗಳೂರು

7) ಕೃಷಿ ನಿರ್ದೇಶಕರು, ಬೆಂಗಳೂರು

8) ಸಚಿವ ಸಂಪುಟ ವ್ಯವಹಾರಗಳ ಇಲಾಖೆ (ಸಚಿವ ಸಂಪುಟ) (ವಿಷಯ ಸಂಖ್ಯೆ. ಸಂ. 108/2004)

9) ಸಂಬಂಧಿಸಿದ ರಾಜ್ಯ ಸರ್ಕಾರದ ಎಲ್ಲಾ ಇಲಾಖಾ ಮುಖ್ಯಸ್ಥರು (ಕೃಷಿ ಆಯುಕ್ತರ ಮೂಲಕ)

10) ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, (ಕೃಷಿ ಆಯುಕ್ತರ ಮೂಲಕ)

11) ಕೃಷಿ ಸಚಿವರ ಆಪ್ತ ಕಾರ್ಯದರ್ಶಿ

12) ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ

13) ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ.

# ವಿಷಯಸೂಚಿ


| | ವಿಷಯ | ಪುಟಗಳು |
|---|---|---|
| 1. | ಸುಸ್ಥಿರತೆಗಾಗಿ ಕೃಷಿ | 7 |
| 2. | ಸಾವಯವ ಕೃಷಿ ತತ್ವಗಳು ಮತ್ತು ಮುಖ್ಯ ಅವಶ್ಯಕತೆಗಳು | 10 |
| 3. | ಸಾವಯವ ಕೃಷಿ ನೀತಿಯ ಧ್ಯೇಯೋದ್ದೇಶಗಳು | 13 |
| 4. | ರಾಜ್ಯದಲ್ಲಿ ಸಾವಯವ ಕೃಷಿಯ ಪರಿಸ್ಥಿತಿ | 14 |
| 5. | ರಾಜ್ಯದಲ್ಲಿ ಸಾವಯವ ಕೃಷಿ ಉತ್ತೇಜನದ ಮಾರ್ಗೋಪಾಯಗಳು | 15 |
| 6. | ಅನುಬಂಧ - I ಮತ್ತು II | 28 |




# 1. ಸುಸ್ಥಿರತೆಗಾಗಿ ಕೃಷಿ

ಸಾವಯವ ಕೃಷಿ ಆಹಾರ ಸ್ವಾವಲಂಬನೆ, ಗ್ರಾಮೀಣಾಭಿವೃದ್ಧಿ ಹಾಗೂ ಪರಿಸರ ಸಂರಕ್ಷಣೆಗೆ ಹಾದಿಯಾಗುವುದರಿಂದ ಅದಕ್ಕೆ ಇಡೀ ವಿಶ್ವದಲ್ಲೆಲ್ಲಾ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತಿದೆ. ಈ ವಿಧಾನದಲ್ಲಿನ ಒಂದು ವಿಶಿಷ್ಠ ಸಂಗತಿಯೆಂದರೆ, ಜೀವ ವೈವಿಧ್ಯತೆಗಾಗಿ ಕೃಷಿಯ ಕೊಡುಗೆ ಹಾಗೂ ಕೃಷಿಗಾಗಿ ಜೀವ ವೈವಿಧ್ಯತೆಯ ಕೊಡುಗೆ ಆಧಾರದ ಮೇಲೆ ಜೀವವೈವಿಧ್ಯತೆಯ ಸುಸ್ಥಿರ ಬಳಕೆಯಾಗುವುದಾಗಿದೆ. ಸಾವಯುವ ಕೃಷಿಯ ಮೂಲಕ ಪಡೆಯಬಹುದಾದ ಆರೋಗ್ಯಕರ ಆಹಾರ, ಉತ್ತಮ ಪರಿಸರ ಮತ್ತು ಮಾಲಿನ್ಯ ರಹಿತ ವಾತಾವರಣದ ಬಗೆಗಿನ ಜನರ ಹೆಚ್ಚಿದ ಅರಿವಿನಿಂದಾಗಿ ಸಾವಯವ ಕೃಷಿ ಪದ್ಧತಿಯ ಅಳವಡಿಕೆಗೆ ಹೆಚ್ಚು ಒತ್ತು ಸಿಕ್ಕಂತಾಗಿದೆ. ವಿಶ್ವದಲ್ಲಿ ಪ್ರಸ್ತುತ 22.81 ದಶಲಕ್ಷ ಹೆಕ್ಟೇರುಗಳಷ್ಟು ಭೂಮಿ ಸಾವಯವ ಕೃಷಿ ಅಡಿಯಲ್ಲಿದ್ದು, ಸಾವಯವ ಆಹಾರ ಉತ್ಪನ್ನಗಳ ಮಾರಾಟ 2005ರ ಹೊತ್ತಿಗೆ 31 ಬಿಲಿಯನ್ ಡಾಲರುಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ.

**1.1** ಬಹಳ ಹಿಂದಿನಿಂದಲೂ ಭಾರತದಲ್ಲಿ ಕೃಷಿ ಬದುಕಿನ ಒಂದು ವಿಧಾನವಾಗಿದ್ದಿತು ಹಾಗೂ ದೇಶದ ಜನರ ಆಲೋಚನೆ, ಪರಿಕಲ್ಪನೆ, ಸಂಸ್ಕೃತಿ ಮತ್ತು ಆರ್ಥಿಕತೆ ಶತ ಶತಮಾನಗಳಿಂದ ರೂಪುಗೊಂಡಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯಾ ನಂತರ ಎರಡು ದಶಕಗಳವರೆವಿಗೂ ಬಹುಪಾಲು ಭಾರತದ ರೈತರಿಗೆ ರಾಸಾಯನಿಕ ಗೊಬ್ಬರಗಳ ಬಳಕೆಯಿಂದಾಗಲೀ ಅಥವಾ ಕೀಟ ಹಾಗೂ ರೋಗ ನಿಯಂತ್ರಣಕ್ಕೆ ರಾಸಾಯನಗಳನ್ನು ಬಳಸುವುದಾಗಲಿ ತಿಳಿದಿರಲಿಲ್ಲ. ವಾಸ್ತವವಾಗಿ ಆಗಿನ ಕೃಷಿ ಸರ್ವಾಂಗೀಣ ದೃಷ್ಟಿಕೋನವುಗಳ್ಳದ್ದಾಗಿತ್ತು ಮತ್ತು ಬಹುಪಾಲು ಕೃಷಿಕರ ವಿಧಾನ ಇದೇ ಆಗಿತ್ತು. ಆದರೆ, ನಿರಂತರವಾಗಿ ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಒದಗಿಸಲು ಆಹಾರ ಧಾನ್ಯಗಳ ಉತ್ಪಾದನೆಯನ್ನು ಕ್ಷಿಪ್ರವಾಗಿ ಹೆಚ್ಚಿಸುವ ಅವಶ್ಯಕತೆ ಕಂಡುಬಂದಿದ್ದರಿಂದ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಲು ಅಣೆಕಟ್ಟುಗಳು, ನೀರಾವರಿ ವ್ಯವಸ್ಥೆಗಳನ್ನು ರಚಿಸಲಾಯಿತು. ಪರಿಕರಗಳಾದಂತಹ ಅಧಿಕ ಇಳುವರಿ ತಳಿಗಳ ಬೀಜಗಳು, ರಾಸಾಯನಿಕ ಗೊಬ್ಬರಗಳು ಮತ್ತು ಸಸ್ಯ ಸಂರಕ್ಷಣಾ ರಾಸಾಯನಗಳನ್ನು ಅಭಿವೃದ್ಧಿಸಿ ಬಳಸಲಾಯಿತು.

ಹೆಚ್ಚುತ್ತಿರುವ ಜನಸಂಖ್ಯೆ ಆಹಾರದ ಬೇಡಿಕೆ ಸರಿದೂಗಿಸುವ ಪ್ರಯತ್ನವಾಗಿ ಆಹಾರೋತ್ಪಾದನೆಯನ್ನು ಹೆಚ್ಚಿಸುವ ಪ್ರಕ್ರಿಯೆಯಲ್ಲಿ ಸಾಂದ್ರ ಬೇಸಾಯ ಪದ್ಧತಿಗಳ ಬಗೆಗೆ ಹೆಚ್ಚು ಒತ್ತು ನೀಡಲಾಯಿತು. ಹಲವು ವರ್ಷಗಳಿಂದ ಭಾರತ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿದ್ದರೂ ಸಹ, ಈ ಬೇಸಾಯ ಪದ್ಧತಿ ಪರಿಸರಕ್ಕೆ ತೀವ್ರ ಹಾನಿ ಹಾಗೂ ಜೀವ ವೈವಿಧ್ಯತೆಯ ನಾಶ ಹಾಗೂ ಮಾನವ ಮತ್ತು ಪ್ರಾಣಿಗಳ ಆರೋಗ್ಯದ ಮೇಲೆ ತೀವ್ರ ಪ್ರತಿಕೂಲ ಪರಿಣಾಮುಗಳನ್ನು ಬೀರಿದೆ. ಕೆಲವೊಮ್ಮೆ ಹೆಚ್ಚಿದ ಉತ್ಪಾದನೆಯಿಂದಾಗಿ ಮಾರುಕಟ್ಟೆಯಲ್ಲಿ ಬೇಡಿಕೆ ಕಡಿಮೆಯಾಗಿ ರೈತರ ಆದಾಯುವೂ ಕಡಿಮೆಯಾಗಿದೆ. ಕಳೆದ ನಾಲ್ಕು ದಶಕಗಳಲ್ಲಿ ಪ್ರಪಂಚದಾದ್ಯಂತ ವಿಕಸನಗೊಂಡ ತಂತ್ರಜ್ಞಾನವು ನೈಸರ್ಗಿಕ ಸಂಪನ್ಮೂಲಗಳ ತಳಹದಿಯ ಹಾಗೂ ಪರಿಸರದೊಂದಿಗೆ ಸಮನಾತ್ಮಕ ವಾಗಿರುವುದಿಲ್ಲ. ಬೆಳೆಯ ಇಳುವರಿಯನ್ನು ಹೆಚ್ಚಿಸುವುದೆಂದರೆ ರಾಸಾಯನಗೊಬ್ಬರಗಳ ಹಾಗೂ ಕೀಟನಾಶಕಗಳ ಬಳಕೆಯನ್ನು ಹೆಚ್ಚಿಸುವುದು ಮತ್ತು ಜಾನುವಾರು ಉತ್ಪಾದನೆಯನ್ನು ಹೆಚ್ಚಿಸಲು ಹಿಂಡಿಗಳ ಹಾಗೂ ಔಷಧಿಗಳ ಬಳಕೆಯನ್ನು ಹೆಚ್ಚಿಸುವುದೇ ಆಗಿದೆ.

**1.2** ಕೃಷಿ ಸಂಶೋಧನೆಯಲ್ಲಾದ ಪ್ರಗತಿಯಿಂದ ಬೇಸಾಯದ ವಿಧಾನದಲ್ಲಿ ಮಹತ್ತರ ಬದಲಾವಣೆಗಳಾಗಿ ಕಳೆದ ನಾಲ್ಕು ದಶಕಗಳಲ್ಲಿ ನೈಸರ್ಗಿಕ ನೆಲೆ, ಪರಿಸರ ಮತ್ತು ಪ್ರಭೇದಗಳ ವಿನಾಶಕ್ಕೆ ಕಾರಣವಾಗಿದೆ. ರಾಸಾಯನಿಕ ಪದ್ಧತಿಗಳು ಈ ಕೆಳಗಿನ ದುಷ್ಪರಿಣಾಮಗಳಿಗೆ ಕಾರಣವಾಗಿದೆ.

- ಮಣ್ಣಿನ ಸವೆತ
- ನೀರಿನ ಲಭ್ಯತೆಯ ಕೊರತೆ
- ಹೆಚ್ಚಿದ ಮಣ್ಣಿನ ಕ್ಷಾರತೆ
- ರಾಸಾಯನ ಗೊಬ್ಬರ ಹಾಗೂ ಕೀಟನಾಶಕ ಗಳಿಂದಾದ ಮಾಲಿನ್ಯ
- ಜೀವ ವೈವಿಧ್ಯತೆಯ ವಿನಾಶ
- ಸಾಮಾಜಿಕ, ಆರ್ಥಿಕ ಮೌಲ್ಯಗಳ ಕುಸಿತ
- ಪರಿಸರದ ಮೇಲೆ ಅಹಿತಕರ ಪರಿಣಾಮ
- ಆಹಾರ ಸುಭದ್ರತೆಗೆ ಅಪಾಯ ಮತ್ತು ಕಡಿಮೆ ಗುಣಮಟ್ಟ
- ಪರಿಕರಗಳ ಹೆಚ್ಚಿನ ಬೆಲೆಯಿಂದಾಗಿ ರೈತರು ಸಾಲದ ಬಲೆಯಲ್ಲಿ ಸಿಕ್ಕಿರುವುದು.

**1.3** ಆಧುನಿಕ ಕೃಷಿ ಬಹುಪಾಲು ಪಳಿಯುಳಿಕೆ ಇಂಧನ ಆಧಾರಿತ ಹಾಗೂ ಶಕ್ತಿಸಾಂದ್ರ ಪರಿಕರಗಳಾದಂತಹ ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು ಹಾಗೂ ಶ್ರಮ ಉಳಿತಾಯದ ಆದರೆ ಶಕ್ತಿಸಾಂದ್ರ ಕೃಷಿ ಉಪಕರಣಗಳ ಮೇಲೆ ಅವಲಂಬಿತವಾಗಿದೆ. ಈ ರೀತಿಯ ತಂತ್ರಜ್ಞಾನದ ಬಳಕೆಯಿಂದಾಗಿ ಉತ್ಪಾದನೆ ಹಾಗೂ ಕಾರ್ಯಕ್ಷಮತೆ ಹೆಚ್ಚಿದರೂ ಸಹ, ಪೋಷಕಾಂಶಗಳ ಕೊರತೆ, ರುಚಿ ಇಲ್ಲದಿರುವುದು ಮತ್ತು ಮಣ್ಣಿನ ಉತ್ಪಾದಕತೆ ಮತ್ತು ಪರಿಸರದ ಮೇಲಾಗುವ ಪ್ರತಿಕೂಲ ಪರಿಣಾಮಗಳ ಬಗೆಗಿನ ಆತಂಕ ಹೆಚ್ಚುತ್ತಿದೆ. ಇದರಿಂದಾಗಿ ರೈತರು ಹಾಗೂ ಸಂಬಂಧಿಸಿದ ಸರ್ಕಾರಿ ಇಲಾಖೆಗಳಿಗೆ ಹೆಚ್ಚಿನ ಸಾಮಾಜಿಕ ಜವಾಬ್ದಾರಿ ಇದೆಯೆಂಬುದು ಅರಿವಾಗುತ್ತದೆ.

**1.4** ಪರಿಸರ ವಿನಾಶದಂತಹ ಪರಿಸ್ಥಿತಿಯ ಗಂಭೀರತೆ ವಿಜ್ಞಾನಿಗಳ ಹಾಗೂ ಯೋಜನೆಗಳ ಗಮನವನ್ನು ಸೆಳೆದಿದ್ದು, ವರ್ತಮಾನದ ಹಾಗೂ ಭವಿಷ್ಯದ ಸಂತತಿಯ ಅವಶ್ಯಕತೆಗಳನ್ನು ಗಮನಿಸಿ ವಿವಿಧ ಮಣ್ಣು ಮತ್ತು ಕೃಷಿ- ಹವಾಮಾನ ಪರಿಸ್ಥಿತಿಗಳಿಗೆ ಸರಿ ಹೊಂದುವ ಪರಿಸರ ಸ್ನೇಹಿ, ಲಾಭದಾಯಕ ಮತ್ತು ಸುಸ್ಥಿರ ಕೃಷಿ ವ್ಯವಸ್ಥೆಯನ್ನು ಅನ್ವೇಷಿಸುವಂತೆ ಮಾಡಿದೆ. ಸಾವಯವ ಕೃಷಿ ಅತಿ ಹೆಚ್ಚು ಸುಸ್ಥಿರವೆಂದು ರುಜುವಾತಾಗಿದೆ. ಈ ಕೃಷಿ ವಿಧಾನಗಳನ್ನು ಅನುಸರಿಸುವುದು ಸಾಂದ್ರಕೃಷಿಗೆ ಮುಂಚಿನ ಕಡಿಮೆ ಉತ್ಪಾದಕತೆಯ ವಿಧಾನಗಳ ಅನುಕರಣೆಯೆಂದು ಭಾವಿಸಬಾರದು. ಸಾವಯವ ಕೃಷಿ ಪ್ರಕೃತಿಗೆ ಪ್ರತಿಸ್ಪಂದಿಸುವಂತದ್ದಾಗಿದೆ. "ಬದುಕು ಹಾಗೂ ಬದುಕಲು ಬಿಡು" ಎನ್ನುವ ಸಿದ್ಧಾಂತ ಆಧಾರಿತವಾಗಿದ್ದು, ಕೃಷಿ-ಅರಣ್ಯ ಹಾಗೂ ಪಶುಸಂಗೋಪನೆಯೊಂದಿಗಿನ ನಿಕಟ ಜೊತೆಗಾರಿಕೆಯೊಂದಿಗೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಬೇಕಾದ ಪರಿಕರಗಳನ್ನು ಕ್ಷೇತ್ರದಲ್ಲಿಯೇ ಪಡೆದುಕೊಳ್ಳುವಂತಾಗಿದೆ.

ಸಾಂದ್ರ ಬೇಸಾಯದ ವಿಧಾನಗಳಿಗೆ ಬದಲಿ ಪದ್ಧತಿಯ ಅನ್ವೇಷಣೆಯಲ್ಲಿ ಬಹುಪಾಲು ದೇಶಗಳು ಸಾವಯುವ ಕೃಷಿಯೇ ಅತ್ಯಂತ ಸೂಕ್ತ ವಿಧಾನವೆಂಬುದನ್ನು ಕಂಡುಕೊಂಡಿವೆ. ಸಸ್ಯದ ಬೆಳವಣಿಗೆ ಮತ್ತು ಬೆಳೆ ಉತ್ಪಾದನೆ ಒಂದು ಸಂಕೀರ್ಣ ಪ್ರಕ್ರಿಯೆಯಾಗಿದ್ದು ಅದು ಹಲವಾರು ಜೀವಿಗಳಲ್ಲಿನ ಪರಸ್ಪರ ಅಂತರ್ ಕ್ರಿಯೆಗಳ ಮೇಲೆ ಅವಲಂಬಿತವಾಗಿದೆ. ಬೆಳೆ ಪರಿವರ್ತನೆ ಮತ್ತು ಪಶುಸಂಗೋಪನೆಯೊಂದಿಗಿನ ನಿಕಟ ಸಂಬಂಧ, ಪರಿಸರ ವ್ಯವಸ್ಥೆಯ ಸಮತೋಲನವನ್ನು ಕಾಪಾಡುವಲ್ಲಿ ಅತಿ ಮುಖ್ಯವೆಂದು ಸಾವಯವ ಕೃಷಿ ಗುರುತಿಸುತ್ತದೆ. ಪರಿಸರ ವ್ಯವಸ್ಥೆಯಲ್ಲಿ ಹಲವಾರು ಪ್ರಾಕೃತಿಕ ಕ್ರಿಯೆಗಳು ನಡೆಯುತ್ತಲಿದ್ದು ರೈತರು ಅವುಗಳ ಅನುಕೂಲಗಳನ್ನು ಪಡೆಯಬೇಕೇ ಹೊರತು ರಾಸಾಯನಿಕಗಳಿಂದ ಅವುಗಳನ್ನು ಮಾರ್ಪಾಡಿಸುವುದಾಗಲಿ ಅಥವಾ ನಾಶಗೊಳಿಸುವುದಾಗಲಿ ಮಾಡಬಾರದು.

**1.5** ಸಾವಯವ ಕೃಷಿಯ ಉದ್ದೇಶವೆಂದರೆ, ಪರಿಸರ ಸ್ನೇಹಿ ಉತ್ಪಾದನಾ ಪದ್ಧತಿಗಳಿಂದ ಮತ್ತು ಕೃಷಿ ವ್ಯವಸ್ಥೆಯಡಿ ಮಣ್ಣಿನ ಫಲವತ್ತತೆ ಕಾಪಾಡುವುದರೊಂದಿಗೆ ರಾಸಾಯನಿಕ ಉಳಿಕೆ ರಹಿತ, ಗುಣಮಟ್ಟದ ಸುರಕ್ಷಿತ ಆಹಾರದ ಉತ್ಪಾದನೆಯಾಗಿದೆ.

ಸಾಮಾನ್ಯವಾಗಿ ಸಾವಯವ ಕೃಷಿಯು:

- ಮಣ್ಣು ಮತ್ತು ಅಂತರ್ಜಲವನ್ನು ರಾಸಾಯನಿಕ ಉಳಿಕೆಗಳಿಂದ ಮಲಿನ ಗೊಳಿಸುವುದಿಲ್ಲ.
- ಸಸ್ಯ ಮತ್ತು ಪ್ರಾಣಿಗಳ ಜೀವ ವೈವಿಧ್ಯತೆಯನ್ನು ಹೆಚ್ಚಿಸುತ್ತದೆ.
- ಮಣ್ಣಿನಿಂದ ಪೋಷಕಾಂಶಗಳ ಬಸಿಯುವಿಕೆಯನ್ನು ತಗ್ಗಿಸುತ್ತದೆ.
- ಪ್ರಾಕೃತಿಕ, ಸ್ಥಳೀಯ ಮತ್ತು ಪುನರ್ ನವೀಕರಿಸಬಹುದಾದ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿದೆ ಹಾಗೂ ಅವುಗಳನ್ನೇ ಸಂಪೂರ್ಣವಾಗಿ ಬಳಸಿಕೊಳ್ಳುತ್ತದೆ.
- ಕಡಿಮೆ ಸಾಂದ್ರತೆಯ ಶಕ್ತಿಯ ಪರಿಕರಗಳನ್ನು ಬಳಸಿಕೊಳ್ಳುತ್ತದೆ ಮತ್ತು
- ಸಸ್ಯ ಸಂರಕ್ಷಣೆಯ ಪ್ರಾಕೃತಿಕ ಸಮತೋಲನವನ್ನು ಅವಲಂಬಿಸಿರುತ್ತದೆ ಎಂದು ನಂಬಲಾಗಿದೆ.

ಮೇಲಿನ ಅಂಶಗಳನ್ನು ಗಮನಿಸಿ ಭಾರತ ಸರ್ಕಾರ ಮತ್ತು ಹಲವಾರು ರಾಜ್ಯ ಸರ್ಕಾರಗಳು ಸಾವಯುವ ಕೃಷಿಯನ್ನು ಬೃಹತ್ ಪ್ರಮಾಣದಲ್ಲಿ ಉತ್ತೇಜಿಸಬೇಕಾದ ಅವಶ್ಯಕತೆಯನ್ನು ಮನಗಂಡಿವೆ. ಈ ದಿಸೆಯಲ್ಲಿ ಭಾರತ ಸರ್ಕಾರ 2000 ಇಸವಿಯಲ್ಲಿ "ಸಾವಯವ ಉತ್ಪಾದನೆಗಾಗಿ ರಾಷ್ಟ್ರೀಯ ಕಾರ್ಯಕ್ರಮು" (ಎನ್.ಪಿ.ಒ.ಪಿ.)ವನ್ನು, ಮಾನಕಗಳನ್ನು ಮತ್ತು ಅಂಗೀಕರಣ ವಿಧಾನಗಳನ್ನು ರೂಪಿಸಿದೆ. ಇದಲ್ಲದೆ "ಇಂಡಿಯಾ ಆರ್ಗ್ಯಾನಿಕ್" ಎಂಬ ರಾಷ್ಟ್ರೀಯ ಲಾಂಛನವನ್ನು ಹೊರತಂದಿದೆ. ಕರ್ನಾಟಕ ಸರ್ಕಾರವೂ ಸಹ ಸಾವಯವ ಕೃಷಿಯನ್ನು ಉತ್ತೇಜಿಸಲು ಹಾಗೂ ಅದರ ಉತ್ತೇಜನಕ್ಕೆ ಸಂಬಂಧಿಸಿದ ಕಾರ್ಯ ನೀತಿಯನ್ನು ಕೈಗೊಳ್ಳಲು ಉದ್ದೇಶಿಸಿದೆ.



# 2. ಸಾವಯವ ಕೃಷಿ ತತ್ವಗಳು ಮತ್ತು ಮುಖ್ಯ ಅವಶ್ಯಕತೆಗಳು

## 2.1 ಸಾವಯವ ಕೃಷಿಯ ತತ್ವಗಳು

ಸಾವಯವ ಕೃಷಿ ಮತ್ತು ಸಂಸ್ಕರಣೆ ಹಲವಾರು ತತ್ವಗಳನ್ನಾಧರಿಸಿದ್ದು ಅವು ಪರಸ್ಪರ ಅವಲಂಬಿತವಾಗಿವೆ:

- ಪ್ರಾಕೃತಿಕ ವ್ಯವಸ್ಥೆಗಳು ಮತ್ತು ನೈಸರ್ಗಿಕ ಚಕ್ರಗಳೊಂದಿಗೆ ರಚನಾತ್ಮಕ ಹಾಗೂ ಉತ್ತೇಜಕ ರೀತಿಯಲ್ಲಿ ಪರಸ್ಪರ ಪ್ರತಿಕ್ರಿಯಿಸುವುದು
- ಕೃಷಿ ವ್ಯವಸ್ಥೆಯೊಳಗಿನ ಸೂಕ್ಷ್ಮ ಜೀವಿಗಳ, ಮಣ್ಣಿನ ಸಸ್ಯ ಮತ್ತು ಇತರೆ ಜೀವರಾಶಿಗಳ ಹಾಗೂ ಸಸ್ಯ ಪ್ರಾಣಿಗಳ ಜೈವಿಕ ಚಕ್ರಗಳನ್ನು ಉತ್ತೇಜಿಸುವುದು
- ಫಲವತ್ತತೆ ಮತ್ತು ಉತ್ಪಾದಕತೆಯನ್ನು ಸುಸ್ಥಿರಗೊಳಿಸುವುದು
- ನೀರು, ಜಲಸಂಪನ್ಮೂಲಗಳು ಹಾಗೂ ಅವುಗಳಲ್ಲಿನ ಇತರ ಜೀವರಾಶಿಗಳ ಸಂರಕ್ಷಣೆ ಹಾಗೂ ವಿವೇಚನಾ ಪೂರ್ಣ ಬಳಕೆಯನ್ನು ಉತ್ತೇಜಿಸುವುದು
- ಜಲ ಮತ್ತು ಮಣ್ಣಿನ ಸಂರಕ್ಷಣೆ
- ಪರಿಸರದಲ್ಲಿನ ನವೀಕರಿಸಬಹುದಾದ ಸಂಪನ್ಮೂಲಗಳನ್ನು ಸ್ಥಳೀಯವಾಗಿ ವ್ಯವಸ್ಥೆಗೊಳಿಸಿದ ಕೃಷಿ ವ್ಯವಸ್ಥೆಯಲ್ಲಿ ಬಳಸುವುದು
- ಕ್ಷೇತ್ರದಲ್ಲಾಗಲಿ ಅಥವಾ ಹೊರಗಾಗಲಿ ಲಭ್ಯವಿರುವ, ಮರು ಬಳಸಬಹುದಾದ ಅಥವಾ ನವೀಕರಿಸಬಹುದಾದ ಮತ್ತು ಅಥವಾ ಸಲಕರಣೆಗಳನ್ನು ಬಳಸುವುದು
- ಕೃಷಿಯೊಂದಿಗೆ ಪಶುಸಂಗೋಪನೆಯನ್ನು ಸಮ್ಮಿಳಿತಗೊಳಿಸುವುದು ಹಾಗೂ ಅದರಿಂದ ಜಾನುವಾರುಗಳಿಗೆ ತಮ್ಮ ಸಹಜ ನಡವಳಿಕೆಯನ್ನು ವ್ಯಕ್ತಗೊಳಿಸುವುವ ವಾಸದ ಪರಿಸ್ಥಿತಿಯನ್ನು ರೂಪಿಸುವುದು
- ಯಾವುದೇ ಕೃಷಿ ಕಾರ್ಯಗಳಿಂದ ಸಂಭವಿಸಬಹುದಾದಂತಹ ಎಲ್ಲ ರೀತಿಯ ಮಾಲಿನ್ಯವನ್ನು ಕಡಿಮೆಗೊಳಿಸುವುದು
- ಕೃಷಿ ವ್ಯವಸ್ಥೆಯ ಅನುವಂಶಿಕ ವೈವಿಧ್ಯತೆಯನ್ನು ಹಾಗೂ ಸಸ್ಯ, ಜಾನುವಾರು ಮತ್ತು ವನ್ಯಜೀವಿಗಳನ್ನೊಳಗೊಂಡಂತೆ ಸುತ್ತಲ ಪರಿಸರವನ್ನು ಸಂರಕ್ಷಿಸುವುದು
- ಬೀಜ ಮತ್ತು ಬೆಳೆಯ ತಳಿಗಳನ್ನೊಳಗೊಂಡಂತೆ ಸಾಂಪ್ರಾದಾಯಿಕ ಮತ್ತು ಸ್ಥಳೀಯ ಜ್ಞಾನವನ್ನು ಸಂರಕ್ಷಿಸಿ ಉತ್ತೇಜಿಸುವುದು.

## 2.2 ಮುಖ್ಯ ಅವಶ್ಯಕತೆಗಳು

ಸಾವಯವ ಕೃಷಿಯ ತತ್ವಗಳನ್ನು ಸಾಧಿಸಲು ಹಾಗೂ ಪರಿಸರ ಸಮತೋಲನವನ್ನು ಕಾಪಾಡಲು ಕೆಲವು ವಿಧಾನಗಳನ್ನು ಅನುಸರಿಸಬೇಕಾಗಿರುತ್ತದೆ. ಈ ತತ್ವಗಳನ್ನು ವಿರೋಧಿಸುವ ವಸ್ತುಗಳನ್ನು ಬಳಸದಿರುವುದು ಅಥವಾ ವಿಧಾನಗಳನ್ನು ಅನುಸರಿಸದಿರುವುದು ಅತ್ಯವಶ್ಯಕ.

- ಕೃಷಿಯಲ್ಲಿ ಬೆಳೆ ಉತ್ಪಾದನೆ, ತೋಟಗಾರಿಕೆ ಮತ್ತು ಅರಣ್ಯೀಕರಣದ ಮೂಲ ಆಧಾರವೆಂದರೆ, ಮಣ್ಣಿನ ರಚನೆ ಮತ್ತು ಫಲವತ್ತತೆ ಕಾಪಾಡುವುದು ಹಾಗೂ ಸುತ್ತಲ ಪರಿಸರದ ಬಗೆಗಿರುವ ಕಾಳಜಿ ಹೆಚ್ಚಿಸುವುದು ಮತ್ತು ಜೀವ ವೈವಿಧ್ಯತೆಯನ್ನು ಕಾಪಾಡುವುದಾಗಿದೆ. ಇದನ್ನು ಸಾಧಿಸಲು:
    - ಸರ್ವತೋಮುಖ ಬೆಳೆ ಪರಿವರ್ತನೆ ಮತ್ತು ಬೆಳೆ ವಿಧಾನ ಅನುಸರಣೆ
    - ಸಾವಯವ ವಸ್ತುಗಳನ್ನು ಪುನರ್ ಬಳಕೆ ಮಾಡುವುದು
    - ಪೀಡೆ, ರೋಗ ಮತ್ತು ಕಳೆ ನಿಯಂತ್ರಣಕ್ಕೆ ಹಲವಾರು ಪರ್ಯಾಯ ವಿಧಾನಗಳನ್ನು ಅಳವಡಿಸುವುದು ಹಾಗೂ ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಮತ್ತು ಕಳೆನಾಶಕಗಳ ಬಳಕೆಯನ್ನು ತಪ್ಪಿಸುವುದು.

ಪರಿಸರ ವ್ಯವಸ್ಥೆಯ ಸಹಜತೆ ಕಾಪಾಡುವಲ್ಲಿ ಜೀವರಾಶಿಗಳ ನೆಲೆ ಅಭಿವೃದ್ಧಿ (ಹ್ಯಾಬಿಟೇಟ್ ಡೆವಲಪ್‌ಮೆಂಟ್) ಗೊಳಿಸುವುದು ಮೂಲಭೂತ ಅಂಶವಾಗಿರುತ್ತದೆ. ಇದರಿಂದಾಗಿ ವಿವಿಧ ಸಸ್ಯ ಮತ್ತು ಪ್ರಾಣಿ ರಾಶಿಯ

ಪರಸ್ಪರ ಲಾಭದಾಯಕ ಸಂಬಂಧ ಏರ್ಪಡವುದಲ್ಲದೆ ಪರಿಸರದಲ್ಲಿನ ಪರಭಕ್ಷಕ ಹಾಗೂ ಪರಾವಲಂಬಿಗಳನ್ನು ಉತ್ತೇಜಿಸಬಹುದಾಗಿದೆ.

- ಪಶುಸಂಗೋಪನೆಯ ಮೂಲಭೂತ ತತ್ವವೆಂದರೆ ಜಾನುವಾರಗಳ ಶರೀರ ಕ್ರಿಯೆ ಹಾಗೂ ಅವುಗಳ ಪರಿಸರ ಅವಶ್ಯಕತೆಗಳನ್ನು ಗೌರವಿಸುವುದು. ಇದನ್ನು ಸಾಧಿಸಲು: ಸಾಕಷ್ಟು ಪ್ರಮಾಣದಲ್ಲಿ ಉತ್ತಮ ಗುಣಮಟ್ಟದ ಸಾವಯವ ಮೇವನ್ನು ಒದಗಿಸುವುದು.
  - ಅವುಗಳ ನಡವಳಿಕೆ ಅವಶ್ಯಕತೆಗನುಗುಣವಾಗಿ ಕೊಟ್ಟಿಗೆ ಇತ್ಯಾದಿಗಳನ್ನು ರಚಿಸುವುದು
  - ಸೂಕ್ತ ಪಶು ವೈದ್ಯಕೀಯ ಸೌಲಭ್ಯವನ್ನು ಒದಗಿಸುವುದು
- ಸಾವಯುವ ವ್ಯವಸ್ಥೆಯಲ್ಲಿ ಜಾನುವಾರುಗಳು ಬಹುಮುಖ್ಯ ಅಂಗವಾಗಿವೆ, ಏಕೆಂದರೆ:
  - ಉಪ ಉತ್ಪನ್ನಗಳನ್ನು ಮೌಲ್ಯವರ್ಧಿತಗೊಳಿಸಿ ನವೀಕರಿಸಲು ಸಹಾಯ ಮಾಡುತ್ತವೆ
  - ಪೋಷಕಾಂಶಗಳ ಚಕ್ರವನ್ನು ಸಂಪೂರ್ಣಗೊಳಿಸಿ ಮಣ್ಣಿನ ಫಲವತ್ತತೆಯನ್ನು ಸಂರಕ್ಷಿಸಲು ಸಹಕರಿಸುತ್ತವೆ
  - ಮೇವಿನ ಬೆಳೆಗಳನ್ನು ಬೆಳೆಯುವುದರಿಂದ ಬೆಳೆ ಪರಿವರ್ತನೆ, ವೈವಿಧ್ಯತೆ ಹಾಗೂ ವ್ಯವಸ್ಥೆಯ ಸಮತೋಲನವನ್ನು ಕಾಪಾಡಲು ಸಹಕಾರಿಯಾಗುತ್ತದೆ
  - ಹಲವಾರು ಕೃಷಿ ಕಾರ್ಯಗಳಿಗೆ 'ಎಳೆತ ಶಕ್ತಿ'ಯುನ್ನು ಕೊಡುತ್ತವೆ.



ಪ್ರಾಕೃತಿಕ ಪರಿಸರ ಸಮತೋಲನ ಸಾಧಿಸಲು ಬೆಳೆ ಉತ್ಪಾದನೆ ಮತ್ತು ಪಶುಸಂಗೋಪನಾ ಕಾರ್ಯಗಳ ಸಮ್ಮಿಳಿತವು ಬುನಾದಿಯಾಗಿರುತ್ತದೆ. ಇದನ್ನು ಸಾಧಿಸಲು ಕ್ಷೇತ್ರದಲ್ಲಿ ಗೊಬ್ಬರ ಮತ್ತು ಮೇವಿನ ಸ್ವಾವಲಂಬನೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಸಾಧಿಸಬೇಕಾಗುತ್ತದೆ.

❖ ಸಾವಯುವ ಉತ್ಪನ್ನಗಳ ಸಂಸ್ಕರಣೆಯ ಬುನಾದಿ ಎಂದರೆ ಸಂಸ್ಕರಣೆಯ ಪ್ರತಿಯೊಂದು ಹಂತದಲ್ಲೂ ಆ ಉತ್ಪನ್ನಗಳ ಮೂಲಭೂತ ಗುಣಗಳು ಹಾಳಾಗದಂತೆ ಸಂರಕ್ಷಿಸಬಹುದಾಗಿದೆ. ಇದನ್ನು ಸಾಧಿಸಲು:

  ➢ ಬಳಸುವ ಉತ್ಪನ್ನಗಳಿಗನುಗುಣವಾಗಿ ಸಂಸ್ಕರಣಾ ವಿಧಾನಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಸುವುದು ಮತ್ತು

  ➢ ಉತ್ತಮ ಸಂಸ್ಕರಣಾ ವಿಧಾನಗಳು, ಪರಿಶುದ್ಧಗೊಳಿಸುವ ವಿಧಾನಗಳು, ಶಕ್ತಿ ಉಳಿಸುವ ತಂತ್ರಜ್ಞಾನಗಳು, ರಾಸಾಯನಿಕ ಸಂರಕ್ಷಕಗಳ ಕನಿಷ್ಠ ಬಳಕೆ ಮತ್ತು ಸಂಸ್ಕರಣೆಗಳಿಗೆ ಒತ್ತು ನೀಡಲು ಮಾನಕಗಳನ್ನು ಅಭಿವೃದ್ಧಿಪಡಿಸುವುದು.

❖ ಸಾವಯುವ ವಿಧಾನದಲ್ಲಿ ಬೆಳೆದ ಉತ್ಪನ್ನದ ಉತ್ಪಾದನೆ ಮತ್ತು ನಂತರದ ಕಾರ್ಯಗಳು ಪರಿಸರದ ಮೇಲೆ ಕನಿಷ್ಠ ಹಾನಿ ಉಂಟು ಮಾಡುವಂತಿರಬೇಕು. ಇದನ್ನು ಸಾಧಿಸಲು:


  ➢ ಸಂಸ್ಕರಣೆ ಮತ್ತು ಸಾಗಾಣಿಕೆಯಲ್ಲಿ ಹಾಲಿ ಮಾಪನಗಳ ಅಥವಾ/ಮತ್ತು ಹೊಸ ಮಾಪನಗಳ ಅಭಿವೃದ್ಧಿಗೊಳಿಸುವುದರಿಂದ ಕ್ಷೇಮಕರವಾಗಿ ತ್ಯಾಜ್ಯಗಳನ್ನು ನಿರ್ವಹಿಸಿ, ಉತ್ಪನ್ನಗಳನ್ನು ರೂಪಿಸುವುದು. ಇದಲ್ಲದೆ ಉತ್ಪನ್ನಗಳ ಪ್ಯಾಕಿಂಗ್ ಮತ್ತು ಮಿತಶಕ್ತಿಯ ಬಳಕೆಯನ್ನು ಸಂಸ್ಕರಣೆ ಮತ್ತು ಸಾಗಾಣಿಕೆಯಲ್ಲಿ ಅಳವಡಿಸುವುದು

  ➢ ಪ್ರಮಾಣೀಕರಣ ಮಾನಕಗಳನ್ವಯದ ಸೂಚನೆಗಳ ಆಧಾರದ ಮೇಲೆ ಉತ್ಪಾದನೆ ಹಾಗೂ ಸಂಸ್ಕರಣಾ ಸ್ಥಳವನ್ನು ವಾರ್ಷಿಕ ಪರಿವೀಕ್ಷಣೆಗೆ ಒಳಪಡಿಸಿದ್ದಲ್ಲಿ, ಸಾಂಪ್ರಾದಾಯಿಕ ಗುಂಪುಗಳು ಉತ್ಪಾದಿಸಿದ ಮತ್ತು ಸಂಸ್ಕರಿಸಿದ ಉತ್ಪನ್ನಗಳನ್ನು "ಸಾವಯುವ" ಎಂದು ಪ್ರಮಾಣೀಕರಿಸಬಹುದು.



# 3. ಸಾವಯವ ಕೃಷಿ ನೀತಿಯ ಧ್ಯೇಯೋದ್ದೇಶಗಳು

- ರೈತರನ್ನು ಸಾಲದ ವಿಷವರ್ತುಲದಿಂದ ಮುಕ್ತಗೊಳಿಸುವುದು ಹಾಗೂ ಅವರು ಸ್ವಾವಲಂಬಿಗಳಾಗಿ ಮತ್ತು ಸ್ವಾಭಿಮಾನವನ್ನು ಪಡೆದುಕೊಳ್ಳುವಂತೆ ಮಾಡುವುದು
- ಮಣ್ಣನ್ನು ಜೀವಂತಗೊಳಿಸಿ ಮಣ್ಣಿನ ಉತ್ಪಾದಕತೆಯನ್ನು ಹೆಚ್ಚಿಸುವುದು, ಸ್ಥಳೀಯ ಸಂಪನ್ಮೂಲಗಳಿಂದ ಬೀಜ, ಗೊಬ್ಬರ ಮತ್ತು ಸಸ್ಯ ಸಂರಕ್ಷಣಾ ಪರಿಕರ ವಸ್ತುಗಳನ್ನು ಪಡೆಯುವಂತೆ ಮಾಡಿ ಇತರರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದಲ್ಲದೆ ಉತ್ಪಾದನಾ ವೆಚ್ಚವನ್ನು ತಗ್ಗಿಸುವುದು
- ಜಲಸಂಪನ್ಮೂಲಗಳ ವಿವೇಚನಾಪೂರ್ಣ ಬಳಕೆ ಮತ್ತು ಉತ್ಪಾದನಾ ಮಟ್ಟವನ್ನು ಕಾಯ್ದುಕೊಳ್ಳುವುದು
- ಉತ್ತಮ ಗುಣಮಟ್ಟದ ಉತ್ಪನ್ನವನ್ನು ಉತ್ಪಾದಿಸುವುದರ ಮೂಲಕ ರೈತರ ಆದಾಯವನ್ನು ಹೆಚ್ಚಿಸುವುದು
- ಸಾಂಪ್ರಾದಾಯಿಕ ಬೆಳೆಗಳನ್ನು ಹಾಗೂ ಸಾಂಪ್ರಾದಾಯಿಕ ಆಹಾರ ಪದ್ಧತಿಗಳನ್ನು ಪ್ರೋತ್ಸಾಹಿಸುವುದರ ಮೂಲಕ ಆಹಾರ ಸುಭದ್ರತೆಯನ್ನು ಹೆಚ್ಚಿಸುವುದು
- ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಪ್ಪಿಸಲು ಉದ್ಯೋಗಾವಾಕಾಶಗಳನ್ನು ಹೆಚ್ಚಿಸುವುದು
- ರೈತರ ಬಹುಪಾಲು ಅವಶ್ಯಕತೆಗಳನ್ನು ಪೂರೈಸಲು ರೈತರ ಸ್ವ-ಸಹಾಯ ಗುಂಪುಗಳ ರಚನೆಗೆ ಒತ್ತು ನೀಡುವುದು
- ಪರಿಸರವನ್ನು ಸಂರಕ್ಷಿಸಿ, ಮಾಲಿನ್ಯ ರಹಿತಗೊಳಿಸಿ, ಮನುಷ್ಯರ ಮತ್ತು ಪ್ರಾಣಿಗಳ ಆರೋಗ್ಯವನ್ನು ಕಾಪಾಡುವುದು
- ಮಳೆಯಾಶ್ರಿತ ಮತ್ತು ಬರಪೀಡಿತ ಪ್ರದೇಶಗಳಲ್ಲಿನ ಬರದ ಪರಿಸ್ಥಿತಿಯನ್ನು ಎದುರಿಸಲು ರೈತರನ್ನು ಸಜ್ಜುಗೊಳಿಸುವುದು
- ಸಾವಯವ ಕೃಷಿಯ ಬಗೆಗಿನ ಬೋಧನೆ ಮತ್ತು ಸಂಶೋಧನೆಯಲ್ಲಿ ಸೂಕ್ತ ಸಾಂಸ್ಥಿಕ ಬದಲಾವಣೆಗಳನ್ನು ತರುವುದು.



# 4. ರಾಜ್ಯದಲ್ಲಿ ಸಾವಯವ ಕೃಷಿಯ ಪ್ರಸ್ತುತ ಪರಿಸ್ಥಿತಿ

**4.1** ಕರ್ನಾಟಕವು ತನ್ನ ಹತ್ತು ಕೃಷಿ ವಲಯಗಳಲ್ಲಿ ವಿವಿಧ ಬಗೆಯ ಮಣ್ಣು ಮತ್ತು ಹವಾಮಾನಗಳನ್ನು ಹೊಂದಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಸಮುದ್ರ ತೀರ ಪ್ರದೇಶ, ಪಶ್ಚಿಮ ಘಟ್ಟಗಳು ಮತ್ತು ಮೈದಾನ ಪ್ರದೇಶಗಳಿದ್ದು ವಿವಿಧ ಬಗೆಯ ಬೆಳೆಗಳನ್ನು ಬೆಳೆಯಲು ಅನುಕೂಲಕರವಾಗಿದೆ. ರಾಜ್ಯದ ವಾರ್ಷಿಕ ಸರಾಸರಿ ಮಳೆ 1130 ಮಿ.ಮೀ. ಇದ್ದು ಹಿತಕರ ತಾಪಮಾನವು ವರ್ಷಾದ್ಯಂತ ವಿವಿಧ ಬೆಳೆಗಳನ್ನು ಬೆಳೆಯಲು ಉತ್ತಮ ಪರಿಸ್ಥಿತಿಗಳನ್ನು ಒದಗಿಸಿದೆ. ರಾಜ್ಯವು ತೋಟಗಾರಿಕೆ ಬೆಳೆಗಳಲ್ಲಿ ಹಾಗೂ ಪಶುಸಂಗೋಪನಾ ಕ್ಷೇತ್ರಗಳಲ್ಲಿಯ ಸಾಧನೆಯಿಂದಾಗಿ ಉತ್ಕೃಷ್ಟ ಸ್ಥಾನ ಗಳಿಸಿದೆ. ಹೀಗಾಗಿ ಕರ್ನಾಟಕ ರಾಜ್ಯವನ್ನು ಅನೇಕ ವೇಳೆ ವಿವಿಧ ಬೆಳೆಗಳ ಬೀಡು ಎಂದು ಕರೆಯಲಾಗಿದೆ. ಜೊತೆಗೆ ರಾಜ್ಯದಲ್ಲಿನ ಅನೇಕ ರೈತರು ಸಾವಯವ ಕೃಷಿಯಲ್ಲಿ ಮೊದಲಿಗರಾಗಿದ್ದು ತಮ್ಮ ಸ್ಥಳೀಯ, ಸ್ವಂತಿಕೆಯ ತಿಳುವಳಿಕೆ ಆಧಾರದಿಂದಲೇ ವಿವಿಧ ಬೇಸಾಯ ಪದ್ಧತಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಅವರು ಸಾವಯವ ನಿರುಪಯುಕ್ತ ವಸ್ತುಗಳನ್ನು ಬೇಸಾಯಕ್ಕೆ ಬಳಸಿಕೊಳ್ಳುವಲ್ಲಿ ತಮ್ಮದೇ ಆದ ವಿಧಾನಗಳನ್ನು ಬೆಳೆಸಿಕೊಂಡಿದ್ದು ಪೀಡೆ ಹಾಗೂ ರೋಗಗಳ ಹತೋಟಿಗಾಗಿ ಸಮಗ್ರ ಪೀಡೆ ಹತೋಟಿ ತಂತ್ರಗಳನ್ನು ರೂಪಿಸಿದ್ದಾರೆ.

**4.2** ಕರ್ನಾಟಕ ರಾಜ್ಯದಲ್ಲಿ ಸದ್ದಿಲ್ಲದೆ ಜರುಗುತ್ತಿರುವ ಈ ಬೆಳವಣಿಗೆಯು ರೈತರು ಸಾವಯವ ಕೃಷಿ ಉತ್ಪನ್ನಗಳಿಗೆ ನಿರ್ದಿಷ್ಟ ಮಾರುಕಟ್ಟೆ ದೊರೆಯುವುದೆಂದು ನಂಬಿರುವುದು ಕಾರಣವಲ್ಲ. ತಮ್ಮ ಆರ್ಥಿಕ ಪರಿಸ್ಥಿತಿಗಳ ಸುಧಾರಣೆಯ ಜೊತೆಗೆ ಹೊರಗಿನಿಂದ ಪೋಷಕಾಂಶ ಪರಿಕರಗಳನ್ನು ಮಣ್ಣಿಗೆ ಹಾಕುವುದರಲ್ಲಿ ಮಿತವ್ಯಯ, ಮಣ್ಣಿನ ಫಲವತ್ತತೆಯ ಸುಧಾರಣೆ, ಮಣ್ಣು ವಿನಾಶದ ತಡೆ, ಜೈವಿಕ ಪೀಡೆ ಹತೋಟಿ ಮತ್ತು ಭೂ ಸಂರಕ್ಷಣೆ ಸಾಧ್ಯವೆಂಬ ಮೂಲ ಉದ್ದೇಶದಿಂದಾಗಿ ರಾಜ್ಯದ ರೈತರು ಸಾವಯವ ಕೃಷಿಗೆ ಮಾರು ಹೋಗಿದ್ದಾರೆ.

**4.3** ಸಾವಯವ ಕೃಷಿಯಲ್ಲಿ ನಿರತರಾದ ಕ್ರಿಯಾಶೀಲ ರೈತ ಸಂಘಗಳು ಅಸ್ತಿತ್ವದಲ್ಲಿದ್ದು ಅವುಗಳನ್ನು ಪರಿಪೋಷಿಸುವ/ ಉತ್ತೇಜಿಸುವ ಸರ್ಕಾರೇತರ ಸಂಸ್ಥೆ (NGO) ಗಳೂ ಇವೆಯೆಂದು ತಿಳಿಸುವುದು ಈ ಸಂದರ್ಭದಲ್ಲಿ ಯುಕ್ತವಾಗಿರುತ್ತದೆ. ರಾಜ್ಯದಲ್ಲಿ ಸಾವಯವ ಕೃಷಿ ಆಧಾರಿತ ಆಹಾರ ಪದಾರ್ಥಗಳ ಬಳಕೆ ಕುರಿತು ಶ್ರೀಮಂತ ವರ್ಗದವರಲ್ಲಿ ಮತ್ತು ನಾಗರೀಕ ಸಮಾಜದಲ್ಲಿ ಅರಿವು ಸಹ ಸತತವಾಗಿ ಹೆಚ್ಚುತ್ತಿದೆ.

**4.4** ಇದೆಲ್ಲಕ್ಕಿಂತ ಹೆಚ್ಚಾಗಿ, ಭಾರತೀಯ ಆಂತರಿಕ ಮಾರುಕಟ್ಟೆ ಸಾಕಷ್ಟು ವಿಶಾಲವಾಗಿದ್ದು, ದೇಶದಲ್ಲಿ ಸಾವಯವ ಉತ್ಪನ್ನಗಳ ಮಾರುಕಟ್ಟೆಗೆ ವಿಫುಲ ಅವಕಾಶಗಳಿವೆ.

ಅಮೇರಿಕ ಸಂಯುಕ್ತ ಸಂಸ್ಥಾನ, ಜಪಾನ್ ಮತ್ತು ಯುರೋಪಿಯನ್ ಒಕ್ಕೂಟಗಳಂಥ ಪ್ರದೇಶಗಳಿಗೆ ಪ್ರಮಾಣೀಕೃತ ಸಾವಯವ ಉತ್ಪನ್ನಗಳನ್ನು ರಫ್ತು ಮಾಡಲು ಸಹ ಹೆಚ್ಚಿನ ಅವಕಾಶಗಳಿರುತ್ತವೆ. ಕೆಲವು ರೈತರು ಸಾವಯವ ಕೃಷಿ ಮಾಡುತ್ತಿದ್ದರೂ ಕೂಡ ಅವರಿಗೆ ಪ್ರಮಾಣೀಕರಣದ ಬಗ್ಗೆ ತಿಳುವಳಿಕೆ ಕಡಿಮೆಯಿರುತ್ತದೆ. ಇವರು ಇನ್ನೂ ಪ್ರಮಾಣೀಕರಣದ ಪ್ರಾಮುಖ್ಯತೆಯನ್ನು ಅರಿಯಬೇಕಾಗಿರುತ್ತದೆ.

**4.5** ರಫ್ತಿಗಾಗಿ ಸಾವಯವ ಉತ್ಪನ್ನಗಳ ಪ್ರಮಾಣೀಕರಣದ ಪ್ರಾಮುಖ್ಯತೆಯನ್ನು ಪರಿಗಣಿಸಿ ಭಾರತ ಸರ್ಕಾರವು ಅಂತರರಾಷ್ಟ್ರೀಯ ಮಾನಕಗಳ ನಿಟ್ಟಿನಲ್ಲಿ ಇಂಟರ್ ನ್ಯಾಷನಲ್ ಫೆಡರೇಶನ್ ಆಫ್ ಆರ್ಗ್ಯಾನಿಕ್ ಅಗ್ರಿಕಲ್ಚರ್ ಮೂವ್‌ಮೆಂಟ್ಸ್‌ಗೆ ಸಮಾನಾಂತರವಾದ ಮಾನದಂಡಗಳನ್ನು (ನ್ಯಾಷನಲ್ ಸ್ಟ್ಯಾಂಡರ್ಡ್ಸ್ ಆಫ್ ಆರ್ಗ್ಯಾನಿಕ್ ಪ್ರೊಡಕ್ಷನ್) ಹೊರತಂದಿದೆ. ಪ್ರಮಾಣೀಕರಣಕ್ಕಾಗಿ ಈಗಾಗಲೇ ಸರ್ಕಾರವು ಅನೇಕ ಸಂಘ ಸಂಸ್ಥೆಗಳನ್ನು ಗುರುತಿಸಿದೆ.



# 5. ರಾಜ್ಯದಲ್ಲಿ ಸಾವಯವ ಕೃಷಿ ಉತ್ತೇಜನದ ಮಾರ್ಗೋಪಾಯಗಳು

## 5.1 ವಿವಿಧ ಇಲಾಖಾ ಯೋಜನೆಗಳ ಸಂಯೋಜನೆಯಿಂದ ಸಮಗ್ರ ರೀತಿಯಲ್ಲಿ ಸಾವಯವ ಕೃಷಿಯ ಉತ್ತೇಜನ

ಪ್ರಸ್ತುತ ರಾಜ್ಯ ಸರ್ಕಾರದ ಅಭಿವೃದ್ಧಿ ಇಲಾಖೆಗಳು ಪ್ರತ್ಯೇಕವಾಗಿ ಒಂದಲ್ಲ ಒಂದು ರೀತಿಯಲ್ಲಿ ಸಾವಯವ ಕೃಷಿ ಬೆಳವಣಿಗೆ ಹಾಗೂ ಪರಿಸರ ಸಂರಕ್ಷಣ ಚಟುವಟಿಕೆಗಳಲ್ಲಿ ಕಾರ್ಯನಿರತವಾಗಿವೆ. ಈ ಎಲ್ಲಾ ಇಲಾಖೆಗಳ ಸಂಬಂಧಿತ ಯೋಜನೆಗಳನ್ನು ಒಂದೆಡೆ ತಂದು ರಾಜ್ಯದಲ್ಲಿ ಸಾವಯವ ಕೃಷಿಯನ್ನು ಸಂಯೋಜಿತವಾಗಿ ಅಭಿವೃದ್ಧಿಪಡಿಸುವುದು ತುಂಬಾ ಅಗತ್ಯವಾಗಿದೆ. ಈ ಮುಂದೆ ತಿಳಿಸಲಾಗಿರುವ ರಾಜ್ಯ/ಭಾರತ ಸರ್ಕಾರದ ಇಲಾಖೆಗಳು/ಅಧೀನ ಸಂಸ್ಥೆಗಳು ಮತ್ತು ಕೃಷಿ ವಿಶ್ವ ವಿದ್ಯಾನಿಲಯಗಳು, ರಾಜ್ಯದಲ್ಲಿ ಸಾವಯವ ಕೃಷಿ ಕಾರ್ಯಕ್ರಮಗಳನ್ನು ಉತ್ತೇಜಿಸಿ, ಆಚರಣೆಗೆ ತರುವಲ್ಲಿ ವಿವಿಧ ಇಲಾಖೆಗಳು ಏಕ ಗವಾಕ್ಷಿಯಡಿಯಲ್ಲಿ ಕಾರ್ಯ ನಿರ್ವಹಿಸಬೇಕು. ರಾಜ್ಯದ ಹಣಕಾಸು ಹಂಚಿಕೆಯನ್ನು "ಸಾವಯವ ಕೃಷಿ" ಲೆಕ್ಕಶೀರ್ಷಿಕೆಯಲ್ಲಿ ಕ್ರೋಢೀಕರಿಸಲಾಗುವುದು ಹಾಗೂ ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿಯು ಈ ನಿಧಿಯನ್ನು ವಿವಿಧ ಯೋಜನೆಗಳು ಮತ್ತು ಸಂಸ್ಥೆಗಳಿಗೆ ಹಂಚಿಕೆ ಮಾಡಲು ಅಧಿಕಾರ ಪಡೆದಿರುತ್ತದೆ.

- ಕೃಷಿ ಇಲಾಖೆ
- ತೋಟಗಾರಿಕೆ ಇಲಾಖೆ
- ಜಲಾಯನ ಅಭಿವೃದ್ಧಿ ಇಲಾಖೆ
- ಪಶುಸಂಗೋಪನಾ ಇಲಾಖೆ
- ರೇಷ್ಮೆ ಇಲಾಖೆ
- ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
- ಮೀನುಗಾರಿಕೆ ಇಲಾಖೆ
- ಶಿಕ್ಷಣ ಇಲಾಖೆ
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
- ಸಹಕಾರ ಇಲಾಖೆ
- ಕೃಷಿ ಮಾರುಕಟ್ಟೆ ಇಲಾಖೆ
- ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
- ವಿಶ್ವವಿದ್ಯಾನಿಲಯ, ಬೆಂಗಳೂರು/ಧಾರವಾಡ
- ಮಾಲಿನ್ಯ ನಿಯಂತ್ರಣ ಮಂಡಳಿ
- ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ
- ಕರ್ನಾಟಕ ಸರ್ಕಾರದ ಸಂಸ್ಥೆಗಳು: ಕಪೆಕ್, ಹಾಪ್‌ಕಾಮ್ಸ್, ಕೆ.ಎಂ.ಎಫ್., ಕೆ.ಎಸ್.ಎಸ್.ಆರ್.ಡಿ.ಐ.
- ಭಾರತ ಸರ್ಕಾರದ ಸಂಸ್ಥೆಗಳು : ಅಪೇಡಾ, ಪಿ.ಡಿ.ಬಿ.ಸಿ., ಆರ್.ಬಿ.ಡಿ.ಸಿ., ಸಿ.ಐ.ಪಿ.ಎಂ.ಸಿ., ಐ.ಐ.ಹೆಚ್.ಆರ್., ಸಿ.ಎಫ್.ಟಿ.ಆರ್.ಐ., ಕೆ.ವಿ.ಐ.ಸಿ.

ರಾಜ್ಯದಲ್ಲಿ ಸಾವಯವ ಕೃಷಿ ಕಾರ್ಯಕ್ರಮಗಳನ್ನು ಕಾರ್ಯಾಚರಣೆಗೆ ತಂದು ಅಭಿವೃದ್ಧಿಪಡಿಸಲು ಕೃಷಿ ಇಲಾಖೆಯಲ್ಲಿ ಒಬ್ಬ ಹೆಚ್ಚುವರಿ ಕೃಷಿ ನಿರ್ದೇಶಕರನ್ನು ಸಂಪೂರ್ಣ ಹೊಣೆಗಾರರನ್ನಾಗಿ ನೇಮಿಸಲಾಗುತ್ತದೆ.

## 5.2 ಸಾವಯವ ಕೃಷಿ ಅಭಿವೃದ್ಧಿಗಾಗಿ ರಾಜ್ಯ ಮಟ್ಟದ ಅಧಿಕಾರಯುಕ್ತ (ಎಂಪವರ್ಡ್) ಸಮಿತಿ

ಸಾವಯವ ಕೃಷಿ ಕಾರ್ಯನೀತಿಯನ್ನು ಮೇಲ್ವಿಚಾರಣೆ ಮಾಡಿ ಆಚರಣೆಗೆ ತರಲು ಹಾಗೂ ಸಾವಯವ ಕೃಷಿಗಾಗಿ ಕಾದಿರಿಸಿದ ಆಯವ್ಯಯ ಹಂಚಿಕೆಯ

ನಿರ್ವಹಣೆಯನ್ನು ಒಳಗೊಂಡಂತೆ ಸಾವಯವ ಕೃಷಿಗೆ ಸಂಬಂಧಪಟ್ಟ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳ ನಡುವೆ ಸಮನ್ವಯ/ಹೊಂದಾಣಿಕೆ ತರಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯನ್ನು ರಚಿಸಲು ಉದ್ದೇಶಿಸಲಾಗಿದೆ.

ಈ ಸಮಿತಿಯ ಕಾರ್ಯಭಾರಗಳು ಮತ್ತು ಹೊಣೆಗಾರಿಕೆಗಳನ್ನು ಅನುಬಂಧ-I ರಲ್ಲಿ ನೀಡಲಾಗಿದೆ. ಈ ಸಮಿತಿಯು ಸಾವಯವ ಕೃಷಿಗೆ ಸಂಬಂಧಿಸಿದ ವಿವಿಧ ಪ್ರಸ್ತಾವನೆಗಳನ್ನು ಪರಾಮರ್ಶಿಸಿ ಅನುಮೋದಿಸಲು ಸಾವಯವ ಕಾರ್ಯ ನಿರ್ವಹಣಾ ಸಮಿತಿ (ವರ್ಕಿಂಗ್ ಕಮಿಟಿ ಆನ್ ಆರ್ಗ್ಯಾನಿಕ್ ಫಾರ್ಮಿಂಗ್) ಸಲಹೆಯನ್ನು ಪಡೆಯುತ್ತದೆ.

## 5.3 ಸಾವಯವ ಕೃಷಿ ಕಾರ್ಯ ನಿರ್ವಹಣಾ ಸಮಿತಿ

ಈ ಸಮಿತಿಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಯ ಕಾರ್ಯಭಾರವನ್ನು ಮತ್ತು ಹೊಣೆಗಾರಿಕೆಗಳನ್ನು ಅನುಬಂಧ-II ರಲ್ಲಿ ಕೊಡಲಾಗಿದೆ. ಈ ಸಮಿತಿಯು ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿಗೆ ತಾಂತ್ರಿಕ ಮಾರ್ಗದರ್ಶನಗಳ ರಚನೆ, ಯೋಜನೆಗಳ ಅನುಮೋದನೆ, ಕಾರ್ಯಕ್ರಮಗಳ ಉಸ್ತುವಾರಿ ಇತ್ಯಾದಿ ವಿಚಾರಗಳಲ್ಲಿ ಸಲಹೆ ನೀಡುವ ಕಾರ್ಯ ನಿರ್ವಹಿಸುತ್ತದೆ.

## 5.4 ಸ್ಥಳ ನಿಶ್ಚಿತ ಸಮಿತಿಗಳು (ಸೈಟ್ ಸ್ಪೆಸಿಫಿಕ್ ಕಮಿಟಿ)

ರಾಜ್ಯದಲ್ಲಿ ಸಾವಯವ ಕೃಷಿಗೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳ ಕಾರ್ಯಾಚರಣೆಯ ವೇಳೆಯಲ್ಲಿ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯ ಪೂರ್ವಾನುಮೋದನೆ ಪಡೆದ ರೈತ ಸಂಘಗಳು/ರೈತರ ಕ್ಲಬ್‌ಗಳು/ರೈತರ ಸಹಕಾರ ಸಂಘಗಳು/ರೈತರ ಕಂಪನಿಗಳು/ಸ್ವಸಹಾಯ ಸಂಘಗಳು/ ಸರ್ಕಾರೇತರ ಸಂಘ ಸಂಸ್ಥೆಗಳು ಕಾರ್ಯ ಯೋಜನೆಗಳ ಮತ್ತು ಅವುಗಳ ಕಾರ್ಯಾಚರಣೆಗಾಗಿ ಸ್ಥಳ ನಿಶ್ಚಿತ ಸಮಿತಿಯನ್ನು ರಚಿಸಬಹುದು. ರಾಜ್ಯಮಟ್ಟದ ಸಮಿತಿಯು ಈ ಸ್ಥಳ ನಿಶ್ಚಿತ ಸಮಿತಿಗಳ ರಚನೆಯನ್ನು ನಿರ್ಧರಿಸುತ್ತದೆ. ಸ್ಥಳ ನಿಶ್ಚಿತ ಸಮಿತಿಯು ಸ್ಥಳ ನಿಶ್ಚಿತ ಕಾರ್ಯಕ್ರಮಗಳನ್ನು ಕುರಿತು ಸಾವಯವ ಕೃಷಿ ಕಾರ್ಯ ನಿರ್ವಹಣಾ ಸಮಿತಿಗೆ ಶಿಫಾರಸ್ಸು ಮಾಡುತ್ತದೆ. ಅವುಗಳನ್ನು ಕಾರ್ಯ ನಿರ್ವಹಣಾ ಸಮಿತಿಯು ಪರಿಶೀಲಿಸಿ ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿಗೆ ಶಿಫಾರಸ್ಸು ಮಾಡುತ್ತದೆ.

## 5.5 ಸಾವಯವ ಕೃಷಿ ಉತ್ತೇಜನದಲ್ಲಿ ಕೃಷಿಕ ಸಮಾಜದ ಪಾತ್ರ

ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿರುವ ಕೃಷಿಕ ಸಮಾಜಗಳು ಸಾವಯವ ಕೃಷಿ ಕಾರ್ಯನೀತಿಯನ್ನು ವಾಸ್ತವಗೊಳಿಸಲು ಹಾಗೂ ಕಾರ್ಯಾಚರಣೆಗೆ ತರುವುದರಲ್ಲಿ ಮುಂದಾಳತ್ವ ವಹಿಸುತ್ತವೆ.

## 5.6 ಸ್ವ-ಸಹಾಯ ಗುಂಪುಗಳು (ಎಸ್.ಎಚ್.ಜಿ)

ಸರ್ಕಾರವು ವಿಶೇಷವಾಗಿ ಒಳ್ಳೆಯ ಗುಣಮಟ್ಟದ ಕಾಂಪೋಸ್ಟ್/ಎರೆಹುಳು ಗೊಬ್ಬರ, ಸಾವಯವ ಬಿತ್ತನೆ/ನಾಟಿ, ಪರಿಕರಗಳು ಮತ್ತು ಸಸ್ಯ ಸಂರಕ್ಷಣ ವಸ್ತುಗಳನ್ನು ಉತ್ಪಾದಿಸುವುದಕ್ಕಾಗಿ ಸ್ವ-ಸಹಾಯ ಗುಂಪುಗಳ ರಚನೆಗೆ ಪ್ರೋತ್ಸಾಹಿಸುತ್ತದೆ. ಈ ಗುಂಪುಗಳು ಸಾವಯವ ಉತ್ಪನ್ನ/ಉತ್ಪಾದನೆಗಳ ಸಂಸ್ಕರಣೆ/ಮೌಲ್ಯ ವರ್ಧನೆ ಮತ್ತು ಮಾರಾಟ ಕಾರ್ಯಗಳನ್ನು ವಹಿಸಿಕೊಳ್ಳಲು ಸರ್ಕಾರ ಪ್ರೋತ್ಸಾಹ ನೀಡುತ್ತದೆ. ಅಲ್ಲದೆ, ಈ ಗುಂಪುಗಳಿಗೆ ಸ್ಥಳೀಯ/ಸಾಂಪ್ರಾದಾಯಿಕ ತಳಿಗಳ ಸಮುದಾಯಿಕ ಬಿತ್ತನೆ ಬೀಜ ಬ್ಯಾಂಕ್‌ಗಳನ್ನು ನಿರ್ವಹಿಸಲು ಸಹ ಪ್ರೋತ್ಸಾಹ ನೀಡಲಾಗುತ್ತದೆ.

## 5.7 ರೈತರ ಸಹಕಾರ ಸಂಘಗಳು

ಸರ್ಕಾರವು ವಿಶೇಷವಾಗಿ ರಾಜ್ಯದಲ್ಲಿ ಸಾವಯವ ಕೃಷಿ ಕಾರ್ಯಕ್ರಮಗಳ ಉತ್ತೇಜನಕ್ಕಾಗಿ ರೈತರ ಸಹಕಾರ ಸಂಘಗಳ ರಚನೆಗೆ ಪ್ರೋತ್ಸಾಹ ನೀಡುತ್ತದೆ. ರೈತ ಸಹಕಾರ ಸಂಸ್ಥೆಗಳಿಗೆ ಸಣ್ಣ ಮತ್ತು ಅತಿ ಸಣ್ಣ ರೈತರು ಸದಸ್ಯರಾಗುವುದಕ್ಕೆ ಒತ್ತು ನೀಡಲಾಗುತ್ತದೆ. ಈ ಸಹಕಾರ ಸಂಸ್ಥೆಗಳು ರೈತರಿಂದ, ರೈತರಿಗಾಗಿ, ರೈತ ವ್ಯವಹಾರ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತವೆ. ಈ ಸಾವಯವ ಕೃಷಿಕ ಸಹಕಾರ ಸಂಸ್ಥೆಗಳಿಗೆ ಮೌಲ್ಯವರ್ಧನೆ, ಪ್ಯಾಕ್ ಮಾಡುವಿಕೆ, ಹೆಸರು ಚೀಟಿ ಅಂಟಿಸುವಿಕೆ, ಪ್ರಮಾಣೀಕರಣ ಮತ್ತು ಸಾವಯವ ಉತ್ಪನ್ನಗಳ ಮಾರಾಟಕ್ಕೆ ಸರ್ಕಾರವು ನೆರವು ನೀಡುತ್ತದೆ.

## 5.8 ರೈತರ ಕಂಪನಿಗಳ ರಚನೆ (ಫಾರ್ಮರ್ಸ್ ಕಂಪನಿ)

ರಾಜ್ಯ ಸರ್ಕಾರವು ಉತ್ಪಾದಕರಿಂದ, ಉತ್ಪಾದಕರಿಗಾಗಿ, ಉತ್ಪಾದಕರ ವ್ಯವಹಾರ ವೇದಿಕೆಯಾಗಿ ಕಾರ್ಯ ನಿರ್ವಹಿಸಲು ರೈತರ ಕಂಪನಿಗಳ ರಚನೆಗೆ ಅನುವು ಮಾಡಿಕೊಡುತ್ತದೆ. (ಈ ಸಂದರ್ಭದಲ್ಲಿ ಉತ್ಪಾದಕ ರೆಂದರೆ ರೈತರೇ ಆಗಿರುತ್ತಾರೆ). ಇದು ಡಿಸೆಂಬರ್ 2002ರ ಕಂಪನಿಗಳ ಕಾಯಿದೆಗಳ IX ಎ ತಿದ್ದುಪಡಿಯ ಮೇರೆಗೆ ಕಾರ್ಪೊರೇಟ್‌ನಂತೆ (Corporate Structure) ಕಾರ್ಯ ನಿರ್ವಹಿಸುತ್ತದೆ. ಸಣ್ಣ ಮತ್ತು ಅತಿ

ಸಣ್ಣ ರೈತರ ರಕ್ಷಣೆಗಾಗಿ ಈ ರೈತರ ಕಂಪನಿಯ ಎಲ್ಲಾ ಸದಸ್ಯರಿಗೆ ತಲಾ ಒಂದೊಂದು ಮತದಾನದ ಹಕ್ಕಿರುತ್ತದೆ. ಈ ಕಂಪನಿಗಳಿಗೆ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗಾಗಿ ಸೌಲಭ್ಯಗಳು, ಪ್ಯಾಕಿಂಗ್ ಮತ್ತು ಹೆಸರು ಚೀಟಿ ಅಂಟಿಸುವ ಸೌಲಭ್ಯಗಳು, ಆಂತರಿಕ ನಿಯಂತ್ರಣ ವ್ಯವಸ್ಥೆಗಳು ಹಾಗೂ ರಾಷ್ಟ್ರೀಯ ಮಾರಾಟಕ್ಕೆ ಸಂಪರ್ಕ ಹೊಂದಲು ಆರ್ಥಿಕ ನೆರವು ನೀಡಲಾಗುತ್ತದೆ. ಕಂಪನಿಯ ಪ್ರತಿ ಸದಸ್ಯರ ಲಾಭಾಂಶವು ಅವರು ಪೂರೈಸುವ ಉತ್ಪನ್ನಗಳ ಪ್ರಮಾಣಕ್ಕೆ ಹಾಗೂ ಕಂಪನಿಯ ಅನುಮೋದಿತ ನಿಯಮಾವಳಿಗಳಿಗೆ ಅನುಗುಣವಾಗಿರುತ್ತದೆ. ಅನುಕೂಲತೆಯ ದೃಷ್ಟಿಯಿಂದ, ಪ್ರಾರಂಭಿಕವಾಗಿ ಕೆಲವು ರೈತರುಗಳು ಒಟ್ಟುಗೂಡಿ ತಮ್ಮಲ್ಲಿಯೇ ಸ್ವ-ಸಹಾಯ ಗುಂಪು ಅಥವಾ ಸಂಘ/ಸಂಸ್ಥೆಯನ್ನು ರಚಿಸಿಕೊಂಡು ಮುಂದೆ ತಿದ್ದುಪಡಿಯಲ್ಲಿರುವ ಅವಕಾಶದಂತೆ ರೈತರ ಕಂಪನಿಯಾಗಿ ಪರಿವರ್ತನೆ ಮಾಡಿಕೊಳ್ಳಬಹುದಾಗಿದೆ.

## 5.9 ಪ್ರದೇಶ/ಸರಕು ಮತ್ತು ಬೆಳೆಗಳ ಆಯ್ಕೆ

ಪ್ರಚಲಿತ ಬೆಳೆ ಸಾಗುವಳಿ ಪದ್ಧತಿಯಿಂದ ಸಾವಯವ ಕೃಷಿಗೆ ಬದಲಾವಣೆ ಮಾಡುವುದನ್ನು ಕಾಲಾನುಗತಿಯಲ್ಲಿ ಪ್ರಯತ್ನಿಸಲಾಗುತ್ತದೆ. ಇದರಿಂದ ರಾಜ್ಯ ಸರ್ಕಾರದಲ್ಲಿಯ ಲಭ್ಯ ಸಂಪನ್ಮೂಲಗಳನ್ನು ಸಾವಯವ ಕೃಷಿ ಅಭಿವೃದ್ಧಿಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದಾಗಿರುತ್ತದೆ. ಈ ದಿಸೆಯಲ್ಲಿ ಪ್ರಾರಂಭಿಕವಾಗಿ ರಾಜ್ಯದ ಕೆಲವು ಪ್ರದೇಶಗಳನ್ನು ಆಯ್ಕೆ ಮಾಡಲು ಪ್ರಸ್ತಾಪಿಸಲಾಗಿದೆ. ಇದಲ್ಲದೆ, ಪ್ರತಿ ಹೋಬಳಿಯಲ್ಲಿ ಕಡೆಯ ಪಕ್ಷ 200-500 ಎಕರೆಗಳುಳ್ಳ ಒಂದು ಹಳ್ಳಿಯನ್ನು ಹಂತ ಹಂತವಾಗಿ ಸಾವಯವ ಕೃಷಿ ಗ್ರಾಮವಾಗಿ ಪರಿವರ್ತಿಸಲಾಗುತ್ತದೆ. ಸಾವಯವ ಕೃಷಿ ಪರಿವರ್ತನೆಗೆ ಪ್ರದೇಶ/ಹಳ್ಳಿಯನ್ನು ಆಯ್ಕೆ ಮಾಡಿಕೊಳ್ಳುವಾಗ ಈ ಮುಂದಿನ ಅಂಶಗಳನ್ನು ಗಮನಿಸಲಾಗುತ್ತದೆ.

- ರಸಗೊಬ್ಬರಗಳು ಮತ್ತು ಕೀಟನಾಶಕಗಳ ಕನಿಷ್ಠ ಬಳಕೆ
- ಬೆಳೆ ಪದ್ಧತಿಗಳು ಮತ್ತ ನಮೂನೆಗಳ ಪ್ರಚಲಿತ ಬೆಳೆ ವೈವಿಧ್ಯತೆ
- ಆ ಪ್ರದೇಶದ ಸಾವಯವ ಕೃಷಿ ಪರಿಕರ ಸಂಪನ್ಮೂಲದ ಸಾಮರ್ಥ್ಯ
- ಕೃಷಿ, ತೋಟಗಾರಿಕೆ, ರೇಷ್ಮೆ ವ್ಯವಸಾಯ, ಪಶುಸಂಗೋಪನೆ, ಹಂದಿ ಸಾಕಣೆ, ಜೇನು ಸಾಕಣೆ ಇತ್ಯಾದಿಗಳನ್ನೊಳಗೊಂಡ ಪ್ರಚಲಿತ ಬೇಸಾಯ ಪದ್ಧತಿಗಳು
- ವಿವಿದೋದ್ದೇಶ ವೃಕ್ಷಗಳ ಸಾಂದ್ರತೆ
- ಪ್ರಸ್ತುತ ರೈತರು ಅನುಸರಿಸುತ್ತಿರುವ ಸಾವಯವ ಕೃಷಿ ಪದ್ಧತಿಗಳ ಹಂತ
- ರೈತ ಗುಂಪುಗಳು/ಸ್ವಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳ ಇರುವಿಕೆ
- ಆ ಪ್ರದೇಶದಲ್ಲಿ ಸಾವಯವ ಉತ್ಪನ್ನಗಳ ರಫ್ತಿಗಿರುವ ಸಾಮರ್ಥ್ಯ
- ಮೂಲಭೂತ ಸೌಕರ್ಯಗಳು ಮತ್ತು ಸಾಗಾಣಿಕೆ ಲಭ್ಯತೆ
- ಸಾವಯವ ಕೃಷಿ ಪದ್ಧತಿಯಲ್ಲಿ ಉತ್ಪಾದನೆ ಕೈಗೊಳ್ಳಲು ವಾಣಿಜ್ಯ/ಔದ್ಯಮಿಕ/ಔಷಧೀಯ/ಸುಗಂಧ/ ಆಹಾರ ಮತ್ತು ವ್ಯಾಪಾರಿ ಪ್ರಾಮುಖ್ಯತೆಯುಳ್ಳ ಬೆಳೆಗಳನ್ನು ಗುರುತಿಸಲಾಗುತ್ತದೆ
- ರೈತರ ಕಂಪನಿಗೆ ವಂತಿಗೆ ನೀಡುವ ಮೂಲಕ ಪಾಲುದಾರರಾಗಲು ಅಲ್ಲಿಯ ರೈತರ ಒಪ್ಪಿಗೆ.

ಈ ವಿಧಾನದಿಂದ ಸ್ವಲ್ಪಮಟ್ಟಿನ ಅನುಭವ ಗಳಿಸಿದ ಮೇಲೆ ಪಡೆಯಲಾದ ಸಾಮರ್ಥ್ಯ ಮತ್ತು ಲಭ್ಯ ಸಂಪನ್ಮೂಲಗಳ ಆಧಾರದ ಮೇಲೆ ಈ ಕಾರ್ಯಕ್ರಮವನ್ನು ಇತರ ಕ್ಷೇತ್ರಗಳಿಗೂ ಸಹ ವಿಸ್ತರಿಸಲಾಗುತ್ತದೆ.

ಅಲ್ಲದೆ, ಆರ್ಥಿಕ ಮೌಲ್ಯದ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಉತ್ತಮ ಗುಣಮಟ್ಟದ ಕೃಷಿ ಪರಿಕರಗಳ ಕೊರತೆ ಹಾಗೂ ತೊಂದರೆಗಳಿಗಿರುವ ಮಳೆಯಾಶ್ರಿತ ಹಾಗೂ ಬರಪೀಡಿತ ಪ್ರದೇಶಗಳಿಗೆ ವಿಶೇಷ ಒತ್ತು ನೀಡಲಾಗಿದೆ. ಅಂಥ ಕ್ಷೇತ್ರಗಳನ್ನು ಗುರುತಿಸಿ, ಅಲ್ಲಿಗೆ ಸೂಕ್ತವೆನಿಸಿದ ಕೃಷಿ ಕಾರ್ಯಕ್ರಮಗಳನ್ನು ಜಾರಿಗೆ ತರಲು ಅಗತ್ಯ ನೆರವಿನ ಕಾರ್ಯಾಚರಣಾ ವಿಧಾನಗಳನ್ನೊಳಗೊಂಡ ಸಮಗ್ರ ಸಾವಯವ ಕೃಷಿ ವಿಧಾನವನ್ನು ರೂಪಿಸಲಾಗುತ್ತದೆ.

## 5.10 ಸಾವಯವ ಸಂಪನ್ಮೂಲಗಳ (ಬಯೋಮಾಸ್) ಉತ್ಪಾದನೆ

ಸಾವಯವ ಕೃಷಿಗೆ ಅಳವಡಿಸಿದ ಕ್ಷೇತ್ರ/ಜಮೀನಿನಲ್ಲಿಯೇ ಸಾವಯವ ಸಂಪನ್ಮೂಲಗಳ ಉತ್ಪಾದನೆ ಕೈಗೊಳ್ಳುವುದು ಅತ್ಯವಶ್ಯಕ. ಪ್ರತಿ ಎರಡು ಎಕರೆಗೆ ಒಂದು ಹಸು ಅಗತ್ಯ. ಕಾಂಪೋಸ್ಟ್ ಉತ್ಪಾದನೆ ಕೈಗೊಳ್ಳಲು ಬೇಕಾದ ಸಗಣಿ ಮತ್ತು ಗಂಜಲ ಪೂರೈಸಲು ಸಾಕಾಗುತ್ತದೆ. ಇದು ಸಣ್ಣ/ಅತಿ ಸಣ್ಣ ರೈತರು ವಾಣಿಜ್ಯ ಮಟ್ಟದಲ್ಲಿ ಆದಾಯ ಗಳಿಸುವ ಚಟುವಟಿಕೆಯೂ ಸಹ ಆಗಿರುವುದರಿಂದ, ಇದಕ್ಕೆ ಪ್ರೋತ್ಸಾಹಿಸಿ ನೆರವು ನೀಡಲಾಗುತ್ತದೆ. ಇದನ್ನು ಸಾಧಿಸಲು ವಿಸ್ತರಣಾ ಕಾರ್ಯಕರ್ತರು ಒಣ ಎಲೆಗಳು, ಕಸ-ಕಡ್ಡಿ ಮತ್ತು

ಬೆರಣಿ ಸುಡುವುದು ನಿಲ್ಲುವಂತೆ ನೋಡಿಕೊಳ್ಳಬೇಕು. ರೈತರ ಜಮೀನಿನಲ್ಲಿಯ ತ್ಯಾಜ್ಯ ಪದಾರ್ಥಗಳು, ಎಲೆ-ಕಸ ಮತ್ತು ಕಳಿಯಬಲ್ಲ ಪದಾರ್ಥಗಳಿಂದ ಕಾಂಪೋಸ್ಟ್ ತಯಾರಿಸಿಕೊಳ್ಳಲು ರೈತರಿಗೆ ಅನುಕೂಲ ಕಲ್ಪಿಸಲಾಗುವುದು. ಒಂದು ವೇಳೆ ರೈತರಿಗೆ ತಾವಾಗಿಯೇ ಕಾಂಪೋಸ್ಟ್ ಮತ್ತು ಸಾವಯವ ವಾಣಿಜ್ಯ ಪದಾರ್ಥಗಳನ್ನು ತಯಾರಿಸಿಕೊಳ್ಳಲು ಸಾಧ್ಯವಿಲ್ಲದಿದ್ದಲ್ಲಿ ರೈತರ ಸಂಘಗಳು/ರೈತರ ಕ್ಲಬ್‌ಗಳು/ರೈತರ ಸಹಕಾರ ಸಂಘಗಳು/ರೈತರ ಕಂಪನಿಗಳು/ಸ್ವ-ಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳು ಕಾಂಪೋಸ್ಟ್ ಉತ್ಪಾದಿಸಿ ಸದಸ್ಯರಿಗೆ ನ್ಯಾಯೋಚಿತ ಬೆಲೆಗೆ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗುವುದು.

## 5.11 ಜೈವಿಕ ವೈವಿಧ್ಯತೆ

ಸಾವಯವ ಕೃಷಿ ಯಶಸ್ವಿಯಾಗಲು ಸ್ಥಳೀಯ ಪ್ರದೇಶಗಳ ಸಸ್ಯ ಪ್ರಭೇದಗಳ ಜೀವ-ವೈವಿಧ್ಯತೆಯನ್ನು ನೆಲೆಗೊಳಿಸುವುದು ಮುಖ್ಯವಾದ ವಿಚಾರವಾಗಿರುತ್ತದೆ. ವಾಸ್ತವವಾಗಿ ಮೇವು/ದಿಮ್ಮಿ/ಇಂಧನ ಮತ್ತು ಜೈವಿಕ ರಾಶಿಗಳ ಉತ್ಪಾದನೆಗಾಗಿ ವೃಕ್ಷ ಬೆಳೆ ಪ್ರಭೇದಗಳ ಸಂಯೋಜನೆಯೂ ಆಗಬೇಕು. ಇದು ಪಕ್ಷಿಗಳ ಮತ್ತು ಉಪಯುಕ್ತ ಕೀಟಗಳ ವಾಸಸ್ಥಾನವಾಗಿರುವುದಲ್ಲದೆ ದೀರ್ಘ ಕಾಲಾವಧಿಯಲ್ಲಿ ಈಗ ಪರಿಗಣನೆಯಲ್ಲಿರುವ ಸುಸ್ಥಿರ ಕೃಷಿ ಪದ್ಧತಿಗೆ ಸಾಧನವಾಗುತ್ತದೆ. ಈ





ದಿಸೆಯಲ್ಲಿ, ಸೂಕ್ತವಾದ ಸಸ್ಯ/ವೃಕ್ಷ ಪ್ರಭೇದಗಳ ಸಂಯೋಜನೆಯನ್ನು ಗುರುತಿಸಿ, ಸಮಗ್ರ ಸಾವಯವ ಕೃಷಿ ವಿಧಾನವನ್ನು ರೂಪಿಸಲಾಗುತ್ತದೆ. ಅಂದರೆ ರೈತರ ಜಮೀನಿನಲ್ಲಿಯೂ ಕೃಷಿ-ತೋಟಗಾರಿಕೆ-ಅರಣ್ಯ-ಹುಲ್ಲುಗಾವಲು-ಮೇವು ಕೃಷಿ ಪದ್ಧತಿಗಳನ್ನು ಪ್ರೋತ್ಸಾಹಿಸಲಾಗುತ್ತದೆ.

## 5.12 ಮಿಶ್ರ ಬೇಸಾಯ

ಮಿಶ್ರ ಬೇಸಾಯವು ಪ್ರಾಕೃತಿಕ ವಿಪತ್ತುಗಳ ವಿರುದ್ಧದ ವಿಮೆ ಹಾಗೂ ಸಾವಯವ ಕೃಷಿಗೆ ಪೂರ್ವಭಾವಿ ಅಗತ್ಯತೆಯಾಗಿದೆ. ಬೆಳೆ ಉತ್ಪಾದನೆಗೆ ಪೋಷಕಾಂಶಗಳನ್ನು ಮತ್ತೆ ಮತ್ತೆ ಪುನರಾವರ್ತನಗೊಳಿಸುವುದು ಅತಿಮುಖ್ಯವಾಗಿದ್ದು ಇದಕ್ಕಾಗಿ ಜಾನುವಾರು ಸಾಕಣೆ ಮಾಡುವುದು ಅವಶ್ಯಕ ಹಾಗೂ ಅದು ಮಿಶ್ರ ಬೇಸಾಯದಲ್ಲಿ ಕಡ್ಡಾಯವೆನಿಸುತ್ತದೆ. ವಾಸ್ತವವಾಗಿ, ಹಸು, ಎಮ್ಮೆ, ಹಂದಿ ಮತ್ತು ಕೋಳಿ ಇತ್ಯಾದಿಗಳಿರುವಂತಹ ಜಾನುವಾರು ಸಾಕಣೆ ಕ್ಷೇತ್ರದಲ್ಲಿ ಬೇಸಾಯ ಉಪ ಉತ್ಪನ್ನಗಳ ಪುನರಾವರ್ತನೆಗೆ ಹಾಗೂ ಅಧಿಕ ಮೌಲ್ಯವರ್ಧನೆಗೆ ಕಾರಣವಾಗಿರುತ್ತದೆ. ಈ ವಿಧಾನದಿಂದ ಮಾತ್ರವೇ ರೈತ ಇಡೀ ವರ್ಷ ಪೂರ್ತಿ ಕಾರ್ಯಶೀಲನಾಗಿರುತ್ತಾನೆ. ಎಲ್ಲಕ್ಕೂ ಹೆಚ್ಚಾಗಿ, ಮಿಶ್ರ ಬೇಸಾಯ ಸ್ವ-ಸುಸ್ಥಿರ ಪದ್ಧತಿಯಾಗಿದ್ದು ಇದರಲ್ಲಿ ಸಾವಯವ ಬೇಸಾಯಕ್ಕೆ ಅಗತ್ಯವಾದ ಸಾವಯವ ಗೊಬ್ಬರಗಳನ್ನು ಕ್ಷೇತ್ರದಲ್ಲಿಯೇ ಉತ್ಪಾದಿಸುವ ಪದ್ಧತಿಯಾಗಿರುತ್ತದೆ.

ಪ್ರಾಣಿ-ಪ್ರೇಮಿ ಸಂಘಗಳವರನ್ನು ರೈತರು ಸಹಯೋಗಗೊಳಿಸಿಕೊಂಡು, ಅವರಿಂದ ಸಾವಯವ ಗೊಬ್ಬರ ಪಡೆದು ಅವರಿಗೆ ಮೇವು ಒದಗಿಸುವಂತೆ "ಕೊಟ್ಟು ತೆಗೆದುಕೊಳ್ಳುವ" ಪೂರೈಕೆ ಸಂಪರ್ಕವನ್ನು ಕಲ್ಪಿಸಿ ಕೊಡಬಹುದಾಗಿದೆ. ಇದರೊಂದಿಗೆ ಅಧಿಕ ಮೌಲ್ಯದ ಸಾವಯವ ಗೊಬ್ಬರದ ಉತ್ಪಾದನೆಗಾಗಿ ಹೈನುಗಾರಿಕೆಯನ್ನು ಚೇತನಗೊಳಿಸಲು ಉದ್ದೇಶಿಸಲಾಗಿದೆ. ಪ್ರಾಣಿಗಳ ಕಸಾಯಿಖಾನೆಗಳಿಂದ ಸಾವಯವ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ಸೂಕ್ತ ರೀತಿಯಲ್ಲಿ ಸಂಸ್ಕರಿಸಿ, ಸಾವಯವ ವಿಧಾನದಲ್ಲಿ ಸಮೃದ್ಧ ಗೊಬ್ಬರ ತಯಾರಿಸಿ, ಬೇಸಾಯಕ್ಕೆ ಉಪಯೋಗಿಸಬಹುದಾಗಿದೆ. ಇದಕ್ಕೆ ಧನ ಸಹಾಯವನ್ನು ನೀಡಲಾಗುತ್ತದೆ.











## 5.13 ಮಳೆ ನೀರು ಸಂಗ್ರಹಣೆ ಸೇರಿದಂತೆ ಮಣ್ಣು ಮತ್ತು ನೀರಿನ ಸಂರಕ್ಷಣೆ

ಸಾವಯವ ಬೇಸಾಯದಲ್ಲಿ ಮಣ್ಣಿನ ಆರೋಗ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಸಾವಯವ ಬೇಸಾಯಕ್ಕೆ ಮೂಲ ಅಗತ್ಯತೆ - ಜೀವಂತ ಮಣ್ಣು. ಬೆಳೆ ಉತ್ಪಾದನೆಯಲ್ಲಿ ನೀರು ಅತಿ ಅಗತ್ಯ ಘಟಕಾಂಶವಾಗಿದ್ದು, ಮಣ್ಣಿನಲ್ಲಿನ ತೇವಾಂಶ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಬೇಕಾಗುತ್ತದೆ. ಸರ್ಕಾರವು ಚಾಲ್ತಿಯಲ್ಲಿರುವ ಜಲಾನಯನ ಕಾರ್ಯಕ್ರಮಗಳ ಮೂಲಕ ಮಣ್ಣು ಮತ್ತು ನೀರು ಸಂರಕ್ಷಣೆಗಾಗಿ ಕೆಳಗಿನ ಕಾರ್ಯಗಳಿಗೆ ಧನ ಸಹಾಯ ನೀಡುತ್ತದೆ.

- ಕೃಷಿ ಹೊಂಡ/ ಬಸಿ ತೊಟ್ಟಿಗಳನ್ನು ನಿರ್ಮಿಸುವಿಕೆ
- ಕಂದಕಗಳು, ಚರಂಡಿಗಳು ಮತ್ತು ಬದುಗಳು ಇತ್ಯಾದಿಗಳ ರಚನೆ
- ಹಿಡುಗುಣಿಗಳು (ಸಿಲ್ಟ್ ಟ್ರ್ಯಾಪ್ಸ್)
- ಮಳೆ ನೀರು ಸಂಗ್ರಹಣೆ ತೊಟ್ಟಿಗಳು
- ಬಾವಿ ಮತ್ತು ಕೊಳವೆ ಬಾವಿ ಪುನಶ್ಚೇತನಗಳ ವಿನ್ಯಾಸಗಳು
- ಮಾಳಿಗೆ ನೀರು ಸಂಗ್ರಹಣಾ ತೊಟ್ಟಿಗಳು

ಮಳೆ ನೀರು ಸಂಗ್ರಹಣೆ ಬಾವಿಗಳ ಪುನಶ್ಚೇತನ ಮತ್ತು ಮರ ನೆಡುವ ಕಾರ್ಯಗಳಿಗೆ ಸೂಕ್ತವಾದ, ಶಾಸನಬದ್ಧ ಕ್ರಮಗಳನ್ನು ಅನುಸರಿಸಿ ಅಂತರ್‌ಜಲ ಮಟ್ಟದ ಸುಧಾರಣೆ ಹಾಗೂ ಮೇಲ್ಮೈ ಮಣ್ಣು ಸಂರಕ್ಷಣೆಯನ್ನು ಕೈಗೊಳ್ಳಲಾಗುವುದು.

## 5.14 ಮಣ್ಣಿನ ಸುಧಾರಣೆ, ಮಣ್ಣಿನ ಫಲವತ್ತತೆ ವೃದ್ಧಿಸುವುದು ಹಾಗೂ ಜೈವಿಕ ವೈವಿಧ್ಯತೆ ನಿರ್ಮಿಸುವುದು

ಜಮೀನುಗಳಲ್ಲಿ ಮಣ್ಣಿನ ಫಲವತ್ತತೆ ಮತ್ತು ಜೈವಿಕ ವೈವಿಧ್ಯತೆಗಳನ್ನು ಪ್ರಗತಿಗೊಳಿಸುವ ಕೆಳಕಾಣಿಸಿದ ಕಾರ್ಯಕ್ರಮಗಳಿಗೆ ಸರ್ಕಾರವು ಧನ ಸಹಾಯ ನೀಡುತ್ತದೆ.

- ಭೂ ಸುಧಾರಣಾ ಕಾರ್ಯಕ್ರಮಗಳು
- ಹಸಿರೆಲೆ ಗೊಬ್ಬರ ಉತ್ಪಾದನೆ, ಅಂತರ ಬೆಳೆ/ಬಹು ಬೆಳೆ/ಬಹು ಅಂತಸ್ತಿನ ಬೆಳೆ ಬೆಳೆಯುವಿಕೆ
- ಬೆಳೆ ಪರಿವರ್ತನೆ ಅನುಸರಣೆ
- ಜಮೀನುಗಳಲ್ಲಿ ಕಾಂಪೋಸ್ಟ್, ಗೊಬ್ಬರ/ಎರೆಹುಳು ಗೊಬ್ಬರ ತಯಾರಿಕೆ
- ಜೀವಂತ ಬದು ನಿರ್ಮಾಣ
- ಸೌದೆ, ಮೇವು, ಮರ ಮುಟ್ಟು ಹಾಗೂ ಹಸಿರೆಲೆ ಗೊಬ್ಬರಕ್ಕೆ ಸೂಕ್ತವಾದ ಜಾತಿ ಮರಗಳನ್ನು ಒದಗಿಸಲು ಹಾಲಿ ಚಾಲ್ತಿಯಲ್ಲಿರುವ ಯೋಜನೆಗಳಿಂದ ಮತ್ತು ಅಗತ್ಯವಿದ್ದಲ್ಲಿ ಹೊಸ ಯೋಜನೆಗಳಿಂದ ನೆರವು ನೀಡಲಾಗುತ್ತದೆ.
- ಮರಗಿಡಗಳ ತೋಪುಗಳನ್ನು ಶಾಶ್ವತವಾಗಿ ಸ್ಥಾಪಿಸುವುದು (ಗುಂಡು ತೋಪು, ನಾಡು ತೋಪು, ದೇವರ ಕಾಡು ಇತ್ಯಾದಿಗಳು)

## 5.15 ಸಾವಯವ ಕೃಷಿ ಪರಿಕರಗಳಿಗೆ ಬೆಂಬಲ

ಸಾವಯವ ಬೇಸಾಯಕ್ಕೆ ಅತಿ ಅಗತ್ಯ ಕೃಷಿ ಪರಿಕರಗಳನ್ನು ರೈತ ಸಂಘಗಳು/ ರೈತರ ಕೂಟಗಳು/ರೈತರ ಸಹಕಾರಿ ಸಂಘಗಳು/ ರೈತರ ಕಂಪನಿಗಳು/



ಸ್ವ-ಸಹಾಯ ಗುಂಪುಗಳು/ ಸರ್ಕಾರೇತರ ಸಂಸ್ಥೆಗಳಿಂದ ರೈತರಿಗೆ ಸೂಕ್ತ ಬೆಲೆಗೆ ಸಿಗುವಂತೆ ಮಾಡುವುದು ಮುಖ್ಯವಾಗಿದ್ದು, ಈ ಕಾರ್ಯಕ್ರಮದಡಿಯಲ್ಲಿ ಕೆಳಗಿನ ಕೃಷಿ ಪರಿಕರಗಳನ್ನು ಪೂರೈಸಬಹುದಾಗಿದೆ.

- ಸಾವಯವ ಬೀಜ/ಸಸಿ ಮತ್ತು ಇತರ ಬಿತ್ತನೆ ವಸ್ತುಗಳು
- ಪೋಷಕಾಂಶ ನಿರ್ವಹಣಾ ಸಾಧನಗಳು
- ಕೀಟ/ರೋಗ ನಿರ್ವಹಣಾ ಸಾಧನಗಳು

ಸಾವಯವ ಸಸ್ಯ ಸಂರಕ್ಷಣಾ ವಸ್ತುಗಳ ಉತ್ಪಾದನೆಯನ್ನು ಕೈಗೊಳ್ಳುವ ರೈತ ಸಂಘಗಳು/ರೈತರ ಕೂಟಗಳು/ ರೈತರ ಸಹಕಾರಿ ಸಂಘಗಳು/ ರೈತರ ಕಂಪನಿಗಳು/ಸ್ವ-ಸಹಾಯ ಗಂಪುಗಳು/ಸರ್ಕಾರೇತರ ಸಂಸ್ಥೆಗಳಿಗೆ ಸರ್ಕಾರ ಪ್ರೋತ್ಸಾಹ ನೀಡುತ್ತದೆ. ಈ ಸಂಸ್ಥೆಗಳಿಗೆ ಸರ್ಕಾರವು ಅಗತ್ಯ ವಸ್ತುಗಳ ಖರೀದಿಗೆ ಅಥವಾ ಉತ್ಪಾದನೆಗೆ ಧನ ಸಹಾಯ ನೀಡುತ್ತದೆ. ಇದರೊಂದಿಗೆ ಈ ಸಂಸ್ಥೆಗಳು ಇತರೆ ಧನ ಸಹಾಯ ಸಂಸ್ಥೆಗಳಿಂದ ಬ್ಯಾಂಕುಗಳ ಪ್ರಾಯೋಜನ ಪ್ರಸ್ತಾವನೆ ಆಧಾರದ ಮೇಲೆ ಅಗತ್ಯ ಧನ ಸಹಾಯ ಪಡೆಯಬಹುದಾಗಿದೆ.

ಕೃಷಿ ಪರಿಕರ ತಯಾರಿಕೆ ಸಂಸ್ಥೆಗಳಿಂದ ತಯಾರಾಗುವ ಪರಿಕರಗಳ ಗುಣಮಟ್ಟ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸಾವಯವ ಕೃಷಿ ಪರಿಕರಗಳನ್ನು ಸಹ ಪ್ರಸ್ತುತ ಇರುವ ಬೀಜ ಕಾಯ್ದೆ 1965, ರಸಗೊಬ್ಬರ ನಿಯಂತ್ರಣ ಆದೇಶ 1985 ಮತ್ತು ಕೀಟನಾಶಕ ಕಾಯಿದೆ 1968 ಇವುಗಳ ವ್ಯಾಪ್ತಿಯಲ್ಲಿ ಬರುವಂತೆ ಕ್ರಮ ಕೈಗೊಳ್ಳುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಲಾಗುವುದು.

ಸಾವಯವ ಬೇಸಾಯಕ್ಕೆ ಅಗತ್ಯ ವಸ್ತುಗಳನ್ನು ಉತ್ಪಾದಿಸುವ ಔದ್ಯೋಗಿಕ ಸಂಸ್ಥೆಗಳು ಶೇಕಡ 5ರಷ್ಟು ಅಧಿಕ ಧನ ಸಹಾಯಕ್ಕೆ ಅರ್ಹವಾಗಿರುತ್ತವೆ ಹಾಗೂ ಇದು ಈಗಾಗಲೇ ಕೈಗಾರಿಕಾ ನೀತಿ 2001-2006ರ ಅನ್ವಯ ದೊರಕುತ್ತಿರುವ ಧನಸಹಾಯಕ್ಕಿಂತ ಹೆಚ್ಚುವರಿಯದಾಗಿರುತ್ತದೆ.

## 5.16 ಮೌಲ್ಯವರ್ಧನೆ, ಕ್ಷೇತ್ರದಲ್ಲಿಯೇ ಸಂಸ್ಕರಣೆ ಮತ್ತು ದಾಸ್ತಾನುಗೊಳಿಸುವ ಕಾರ್ಯಗಳಿಗೆ ನೆರವು

ಸಾವಯವ ಬೇಸಾಯ ಮಾಡುವ ರೈತರು ತಮ್ಮ ಉತ್ಪಾದನೆಗಳನ್ನು ಮೌಲ್ಯವರ್ಧನಗೊಳಿಸುವ ರೈತ ಸಂಘಗಳು/ರೈತರ ಕ್ಲಬ್‌ಗಳು/ರೈತರ ಸಹಕಾರಿ ಸಂಘಗಳು/ ರೈತರ ಕಂಪನಿಗಳು/ಸ್ವ-ಸಹಾಯ ಗುಂಪುಗಳು/ ಸರ್ಕಾರೇತರ ಸಂಸ್ಥೆಗಳೊಂದಿಗೆ ಪಾಲುದಾರರಾಗಿರುತ್ತಾರೆ. ಇದಕ್ಕೆ ಕ್ಷೇತ್ರ ಮಟ್ಟದಲ್ಲಿ ನಡೆಸುವ ಪ್ರಾಥಮಿಕ ವರ್ಗೀಕರಣ ಕಡ್ಡಾಯವಾಗಿರುತ್ತದೆ. ಈ ಎಲ್ಲಾ ರೈತ ಸಂಸ್ಥೆಗಳು ಕೈಗೊಳ್ಳುವ ಎಲ್ಲಾ ಬಗೆಯ ಸಂಸ್ಕರಣಾ ಚಟುವಟಿಕೆಗಳಿಗೆ ನೆರವು ನೀಡಲಾಗುತ್ತದೆ. ಇದಕ್ಕೆ ಅಗತ್ಯವಾದ ಯಾವುದೇ ಬಗೆಯ ಯಂತ್ರೋಪಕರಣಗಳು, ಪ್ಯಾಕಿಂಗ್ ಸಾಮಗ್ರಿ ಮತ್ತು ಪರಿಸರ ಸ್ನೇಹಿ ವಸ್ತುಗಳನ್ನು ಖರೀದಿಸಲು ರಿಯಾಯಿತಿ ನೀಡಲಾಗುತ್ತದೆ. ಭಾರತ ಸರ್ಕಾರದ ಆಹಾರ ಸಂಸ್ಕರಣಾ ಸಚಿವಾಲಯದಿಂದ ಸಿಗುವ ಧನಸಹಾಯದೊಂದಿಗೆ ರಾಜ್ಯ ಸರ್ಕಾರವೂ ಕೂಡ ರೈತ ಗುಂಪಿನವರು ಕೈಗೊಳ್ಳುವ ಕ್ಷೇತ್ರ ಮಟ್ಟದ ಸಂಸ್ಕರಣಾ ಚಟುವಟಿಕೆಗಳಿಗೆ ಸೂಕ್ತ ರೀತಿಯ ಉತ್ತೇಜನಗಳು ಮತ್ತು ರಿಯಾಯಿತಿಗಳನ್ನು ಒದಗಿಸುತ್ತದೆ.

ಇದರೊಂದಿಗೆ ಕೃಷಿ ಉತ್ಪನ್ನ ಮಂಡಳಿ (ಎ.ಪಿ.ಎಂ.ಸಿ.) ಪ್ರಾಂಗಣಗಳಲ್ಲಿ ಈಗಾಗಲೇ ಇರುವ ಮೂಲಭೂತ ಸೌಕರ್ಯಗಳೊಂದಿಗೆ ಶೀತಲ ದಾಸ್ತಾನು ಸೌಲಭ್ಯಗಳನ್ನು ವಿಸ್ತರಿಸಿ ಸಾವಯವ ವಿಧಾನದಲ್ಲಿ ಬೆಳೆದ ಉತ್ಪನ್ನಗಳಿಗೆ ಪ್ರತ್ಯೇಕ ದಾಸ್ತಾನು ಸ್ಥಳವನ್ನು ಸೃಜಿಸಲಾಗುವುದು.

## 5.17 ಸಾವಯವ ಉತ್ಪನ್ನ ಸಂಸ್ಕರಣಾ ಉದ್ಯಮಕ್ಕೆ ನೆರವು

ಸಾವಯವ ಉತ್ಪನ್ನ ಸಂಸ್ಕರಣಾ ಘಟಕಗಳನ್ನು ಬೆಂಬಲಿಸಲು ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸಲಾಗುವುದು. ಗುಡಿ ಕೈಗಾರಿಕೆಗಳಿಗೆ ಅನ್ವಯವಾಗುವಂತಹ ತೆರಿಗೆ ವಿನಾಯಿತಿಗಳನ್ನು ಇವುಗಳಿಗೂ ಸಹ ವಿಸ್ತರಿಸಲಾಗುವುದು.

ಸಾವಯವ ಉತ್ಪನ್ನ ಸಂಸ್ಕರಣಾ ಉದ್ಯಮವನ್ನು ಕಾರ್ಮಿಕ ಕಾಯ್ದೆಯಡಿ ಅರೆ ಕಾಲಿಕ ಉದ್ಯಮ ಎಂದು ಘೋಷಿಸಲಾಗುವುದು. ಈ ಘಟಕಗಳಿಗೆ, ವಿದ್ಯುತ್ ಬಳಕೆ ದರದಲ್ಲಿ 30 ದಿನಗಳಿಗೊಮ್ಮೆ ಸೀಮಿತವಾಗುವಂತೆ ಕನಿಷ್ಠ ಡಿಮ್ಯಾಂಡ್ ಶುಲ್ಕ ಕಟ್ಟುವುದರಿಂದ ವಿನಾಯಿತಿಗೊಳಿಸಲಾಗುವುದು. ವಿದ್ಯುತ್ ಪೂರೈಕೆ ಸಂಸ್ಥೆಯು ಇವರಿಗೆ ಸಾಮಾನ್ಯ ದರಗಳ ಬದಲು ವಿನಾಯಿತಿ ದರದಲ್ಲಿ ವಿದ್ಯುತ್ತನ್ನು ಪೂರೈಸಬೇಕು. ಇದು ಪ್ರಾರಂಭದ ಮೂರು ವರ್ಷಗಳಿಗೆ ಅನ್ವಯವಾಗುತ್ತದೆ. ಇದೇ ರೀತಿ ಸಾವಯವ ಸಂಸ್ಕರಣಾ ಉದ್ಯಮಗಳು ವಿದ್ಯುತ್ ತೆರಿಗೆ ಪಾವತಿಯಲ್ಲಿಯೂ ಸಹ ವಿನಾಯಿತಿ ಪಡೆಯುತ್ತವೆ.

ರೈತರಿಂದ ನೇರವಾಗಿ ಒಪ್ಪಂದ ಪದ್ಧತಿ ಮೇರೆಗೆ ಕೃಷಿ ಉತ್ಪನ್ನಗಳನ್ನು ಖರೀದಿಸುವ ಎಲ್ಲಾ ಸಾವಯವ ಸಂಸ್ಕರಣಾ ಘಟಕಗಳು ಸಹ ಕೃಷಿ ಉತ್ಪನ್ನ ಮಾರಾಟ ಮಂಡಳಿ ಕಾಯಿದೆಯನ್ವಯ ವಿಧಿಸಲಾಗುವ ಮಾರಾಟ ತೆರಿಗೆ/ ಸೆಸ್‌ನ ವಿನಾಯಿತಿ ಪಡೆಯುತ್ತವೆ.



ಸಾವಯವ ಉತ್ಪನ್ನಗಳನ್ನು ಬಳಸುವ ಎಲ್ಲಾ ಸಂಸ್ಕರಣಾ ಘಟಕಗಳೂ ಸಹ ಕೈಗಾರಿಕಾ ನೀತಿ 2001-2006ರ ಅನ್ವಯ ನಿಗದಿಪಡಿಸಿದ ಒಟ್ಟು ಧನ ಸಹಾಯದ ಜೊತೆಯಲ್ಲಿ ಶೇಕಡ 5 ಹೆಚ್ಚಿನ ನೆರವಿಗೆ ಅರ್ಹವಾಗುತ್ತವೆ.

ಸಾವಯವ ಸಂಸ್ಕರಣಾ, ಉದ್ದಿಮೆಗಳಿಗೆ ಹೆಚ್.ಎ.ಸಿ.ಸಿ.ಪಿ. ಮತ್ತು ಇತರ ಸಂರಕ್ಷಣಾ ನಿಯಮಗಳು, ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಅಂಗೀಕೃತ ಸಂಸ್ಥೆಗಳಿಂದ ಪ್ರಮಾಣ ಪಡೆಯುವ ಅಗತ್ಯ ವೆಚ್ಚಗಳನ್ನು ಭರಿಸಲು ಹಾಗೂ ಹೊಸ ಕೈಗಾರಿಕಾ ನೀತಿಯಡಿಯಲ್ಲಿ ಐ.ಎಸ್.ಓ ಮತ್ತು ಇತರ ಅಂತರರಾಷ್ಟ್ರೀಯ ಪ್ರಮಾಣವನ್ನು ಪಡೆಯಲು ಉತ್ತೇಜಕಗಳನ್ನು ವಿಸ್ತರಿಸಲಾಗುವುದು.

## 5.18 ಪುನರ್ ನವೀಕರಿಸುವ ಶಕ್ತಿ ಮೂಲಗಳ ಸ್ಥಾಪನೆ

ಸಾವಯವ ಕೃಷಿ ಅಳವಡಿಸಿದ ಜಮೀನುಗಳಲ್ಲಿ ಜೈವಿಕ-ಅನಿಲ ಸ್ಥಾವರಗಳು, ಸೌರಶಕ್ತಿ ಘಟಕಗಳು ಮತ್ತು ಗಾಳಿ ಶಕ್ತಿ ಘಟಕಗಳನ್ನು ಸ್ಥಾಪನೆ ಮಾಡಲು ನೆರವು ನೀಡಲಾಗುವುದು. ಇದರಿಂದ ವಿದ್ಯುತ್ ಮತ್ತು ಪೆಟ್ರೋಲಿಯಂನಂತಹ ಬಾಹ್ಯ ಮೂಲ ಶಕ್ತಿಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಇದರೊಂದಿಗೆ, ಪ್ರತಿ ಜೈವಿಕ ಅನಿಲ ಸ್ಥಾವರದೊಂದಿಗೆ ಒಂದು ಎರೆಹುಳು ಕಾಂಪೋಸ್ಟ್ ಘಟಕ ಸ್ಥಾಪನೆಯನ್ನು ಸಹ ಕಡ್ಡಾಯಗೊಳಿಸಲಾಗುವುದು.

## 5.19 ಪರಿವರ್ತನೆ ಹಾಗೂ ಪ್ರಮಾಣೀಕರಣಕ್ಕಾಗಿ ನೆರವು

ಸಾವಯವ ಕ್ಷೇತ್ರವೆಂದು ಅಧಿಕೃತ ಸಂಸ್ಥೆಗಳಿಂದ ಪ್ರಮಾಣೀಕರಣವನ್ನು ಪಡೆಯುವುದು ಸಾವಯವ ಕೃಷಿಯ ಮುಖ್ಯ ಅಂಶವಾಗಿರುತ್ತದೆ. ಪ್ರಮಾಣ ಪತ್ರವನ್ನು ಪಡೆಯಲು ಸಾವಯವ ಕ್ಷೇತ್ರದಲ್ಲಿ ನಡೆಸಲಾದ ಎಲ್ಲಾ ಚಟುವಟಿಕೆಗಳ ವ್ಯವಸ್ಥಿತವಾದ ದಾಖಲೆಗಳನ್ನು ಕಾಪಾಡುವುದು ಅತ್ಯಾವಶ್ಯಕ. ಸರ್ಕಾರವು ಇದಕ್ಕಾಗಿ ಸೇವಾ ಕಾರ್ಯಕರ್ತರನ್ನು ಒದಗಿಸುತ್ತದೆ. ಪ್ರಾರಂಭದ ಮೂರು ವರ್ಷಗಳವರೆಗೆ ಸರ್ಕಾರವು ಪ್ರಮಾಣೀಕರಣ ಶುಲ್ಕವನ್ನು ಭಾಗಶಃ ಭರಿಸುತ್ತದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗುಂಪು ಪ್ರಮಾಣೀಕರಣ ಪಡೆಯಲು ಪ್ರೋತ್ಸಾಹ ನೀಡಲಾಗುವುದು.

ಪ್ರಮಾಣೀಕರಣಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಎನ್.ಎಸ್.ಒ.ಪಿ., ಐ.ಎಫ್.ಒ.ಎ.ಎಂ. ಮಾನದಂಡಗಳನ್ನು ಅನುಸರಿಸಲಾಗುವುದಲ್ಲದೆ ಸಂಸ್ಥೆಗಳಿಗೆ ಪ್ರಮಾಣೀಕರಣ ನೀಡುವ ಮಾನ್ಯತೆ ನೀಡಲಾಗುವುದು. ಸಾವಯವ ಕ್ಷೇತ್ರಗಳ ಪ್ರಮಾಣೀಕರಣ ಕಾರ್ಯಕ್ಕಾಗಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ತನಿಖಾ ಮತ್ತು ಪ್ರಮಾಣೀಕರಣ ಸಂಸ್ಥೆಗಳನ್ನು ಮತ್ತು ತರಬೇತಿ ಪಡೆದ ಪರಿವೀಕ್ಷಕರನ್ನು ಗುರುತಿಸಲಾಗುವುದು. ಪರಿವೀಕ್ಷಕರ ತರಬೇತಿಗಾಗಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಸ್ಥಳೀಯ ಪ್ರಮಾಣೀಕರಿಸುವ ಸಂಸ್ಥೆಗಳ ಸ್ಥಾಪನೆಗೆ ಧನಸಹಾಯವನ್ನು ನೀಡಲಾಗುವುದು.

## 5.20 ಸಾವಯವ ಉತ್ಪನ್ನಗಳ ಮಾರಾಟ

ಪ್ರಸ್ತುತ ಇರುವ ಮಾರಾಟ ಸಂಸ್ಥೆಗಳಾದ ಸಫಲ್/ಎ.ಪಿ.ಎಂ.ಸಿ./ ಹಾಪ್‌ಕಾಮ್ಸ್/ಎನ್.ಸಿ.ಎಸ್./ಕಪೆಕ್/ಕೆ.ವಿ.ಐ.ಬಿ.ಗಳು ಸಾವಯವ ಉತ್ಪನ್ನಗಳ ಮಾರಾಟಕ್ಕಾಗಿ ಪ್ರತ್ಯೇಕ ಮಾರಾಟ ಕೇಂದ್ರಗಳನ್ನು ಕಲ್ಪಿಸುವಂತೆ ಕ್ರಮ ಕೈಗೊಳ್ಳಲಾಗುವುದು. ಅಗತ್ಯವಿರುವಷ್ಟು ಸಂಗ್ರಹಣಾ ಸೌಕರ್ಯವನ್ನು ಪ್ರತ್ಯೇಕವಾಗಿ, ಸಾವಯವ ಉತ್ಪನ್ನಗಳಿಗಾಗಿಯೇ ಕಲ್ಪಿಸುವುದರಿಂದ ಇತರ ಸಾಂಪ್ರಾದಾಯಿಕ ಉತ್ಪನ್ನಗಳ ಮಿಶ್ರಗೊಳ್ಳುವಿಕೆಯಿಂದ ತಪ್ಪಿಸಬಹುದಾಗಿರುತ್ತದೆ. ಇದರೊಂದಿಗೆ, ರೈತ



ಸಂಘಗಳು/ರೈತರ ಕ್ಲಬ್‌ಗಳು/ರೈತರ ಸಹಕಾರಿ ಸಂಸ್ಥೆಗಳು/ರೈತರ ಕಂಪನಿಗಳು/ಸ್ವ-ಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳು ನೇರವಾಗಿ ಸಾವಯವ ಉತ್ಪನ್ನಗಳ ಮಾರಾಟ ಮಾಡುವಿಕೆಯನ್ನು ಬೆಂಬಲಿಸಲಾಗುವುದು. ಉತ್ಪನ್ನ ಸ್ಥಳದಿಂದ ಗ್ರಾಹಕರ ಸ್ಥಳಕ್ಕೆ ಉತ್ಪನ್ನಗಳನ್ನು ಸಾಗಣೆ ಮಾಡುವ ವೆಚ್ಚಕ್ಕೆ ವಿನಾಯಿತಿ ಕಲ್ಪಿಸಲಾಗುವುದು.

ಅರಣ್ಯದ ಕಿರು ಉತ್ಪನ್ನಗಳನ್ನೂ ಸಹ (ಉದಾ - ಜೇನು ತುಪ್ಪ, ಸೀಗೆಕಾಯಿ, ಗಿಡಮೂಲಿಕೆ ಇತ್ಯಾದಿ) ಈ ಕೇಂದ್ರಗಳಿಂದ ಮಾರಾಟ ಮಾಡಲಾಗುತ್ತದೆ. ಅರಣ್ಯ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟಿನ ಸ್ವ-ಸಹಾಯ ಸಂಸ್ಥೆಯವರಿಗೆ ನೆರವಾಗುವ ದೃಷ್ಟಿಯಿಂದ ಅರಣ್ಯ ಇಲಾಖೆಯವರು ಅರಣ್ಯ ಪ್ರದೇಶಗಳಲ್ಲಿ ಪ್ರಮಾಣೀಕರಣ ಕಾರ್ಯಕ್ಕೆ ನೆರವಾಗುವರು.

ನಗರ ಪ್ರದೇಶಗಳಲ್ಲಿ ಸರ್ಕಾರದ ವತಿಯಿಂದ ಕಾಲಕಾಲಕ್ಕೆ ಸಾವಯವ ಉತ್ಪನ್ನಗಳ ಮೇಳ/ಪ್ರದರ್ಶನಗಳನ್ನು ವ್ಯವಸ್ಥೆಗೊಳಿಸಲಾಗುವುದು. ಸಾವಯವ ಉತ್ಪನ್ನ ಬೆಳೆಗಾರರೊಂದಿಗೆ ಗ್ರಾಹಕರ ಸಂಪರ್ಕವನ್ನು ವಾರದ ಸಂತೆಗಳಲ್ಲಿ ವ್ಯವಸ್ಥೆಗೊಳಿಸಲಾಗುತ್ತದೆ.

ಖಾದಿ ಮತ್ತು ಗ್ರಾಮೀಣ ಉದ್ಯಮಗಳ ಆಯೋಗದ ಧ್ಯೇಯೋದ್ದೇಶಗಳು ಸಾವಯವ ಕೃಷಿ ಧ್ಯೇಯೋದ್ದೇಶಗಳಿಗೆ ಹೊಂದಾಣಿಕೆ ಆಗುತ್ತವೆ. ಕೆ.ವಿ.ಐ.ಸಿ.ಯಲ್ಲಿ ಪ್ರಸ್ತುತ ಇರುವ ಯೋಜನೆಗಳನ್ನು ಸಾವಯವ ರೈತರು ಮತ್ತು ಸಂಸ್ಕರಣಾಕಾರರಿಗೆ ಉಪಯುಕ್ತವಾಗುವಂತೆ ಪರಿವರ್ತಿಸಿಕೊಳ್ಳಲಾಗುವುದು. ಕೆ.ವಿ.ಐ.ಬಿ./ಕೆ.ವಿ.ಐ.ಸಿ. ಮಾರಾಟ ಕೇಂದ್ರಗಳನ್ನು ಸಾವಯವ ಉತ್ಪನ್ನ ಮಾರಾಟಕ್ಕೆ ಉಪಯೋಗಿಸಿಕೊಳ್ಳಲಾಗುವುದು. ಸರ್ಕಾರವು ವಿಶೇಷವಾಗಿ ಸಾವಯವ ಉತ್ಪನ್ನಗಳ ಮಾರಾಟಕ್ಕಾಗಿಯೇ ಜಿಲ್ಲಾ ಕೇಂದ್ರದಲ್ಲಿ ಕನಿಷ್ಠ ಒಂದು ಹಾಗೂ ನಗರದಲ್ಲಿ ಎರಡು ಮಾರಾಟ ಕೇಂದ್ರಗಳ ಆರಂಭಕ್ಕೆ ಸೌಲಭ್ಯ ಕಲ್ಪಿಸುತ್ತದೆ. ಈ ಮಾರಾಟ ಕೇಂದ್ರಗಳನ್ನು ರೈತ ಸಂಘಗಳು/ರೈತರ ಕ್ಲಬ್‌ಗಳು/ ರೈತರ ಸಹಕಾರಿ ಸಂಸ್ಥೆಗಳು/ರೈತರ ಕಂಪನಿಗಳು/ಸ್ವ-ಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳವರು ನಡೆಸಬಹುದಾಗಿದೆ. ರೈತರಲ್ಲಿ/ರೈತರ ಗುಂಪುಗಳಲ್ಲಿ/ರೈತರ ಸಂಘಗಳಲ್ಲಿನ ಸಾವಯವ ಕೃಷಿ ಉತ್ಪನ್ನಗಳ ಲಭ್ಯತೆಯ ಬಗ್ಗೆ ಮಾಹಿತಿಯನ್ನು ಇಂಟರ್‌ನೆಟ್ ಮುಖಾಂತರ ಒದಗಿಸಲಾಗುವುದು.

### 5.21 ಸಾಲ ಸೌಲಭ್ಯಗಳು

ಸಾವಯವ ಬೇಸಾಯಕ್ಕೆ ಕಡಿಮೆ ದರದಲ್ಲಿ ಸಾಲ ನೆರವು ಒದಗಿಸುವುದು ಅತಿ ಮುಖ್ಯವಾದುದು. ನಬಾರ್ಡ್, ರಾಷ್ಟ್ರೀಕೃತ ಬ್ಯಾಂಕ್‌ಗಳು, ಪ್ರಾಂತೀಯ ಗ್ರಾಮೀಣ ಬ್ಯಾಂಕ್‌ಗಳು ಮತ್ತು ಸಹಕಾರಿ ಸಂಸ್ಥೆಗಳವರನ್ನು ವಿಶೇಷ ಸಾಲ ಸೌಲಭ್ಯ ರೂಪಿಸಿ, ರೈತ ಸಂಸ್ಥೆ/ರೈತರ ಸಂಘಗಳು/ರೈತರ ಕ್ಲಬ್‌ಗಳು/ರೈತರ ಸಹಕಾರಿ ಸಂಸ್ಥೆಗಳು/ರೈತರ ಕಂಪನಿಗಳು/ಸ್ವ-ಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳು, ಸಂಸ್ಕರಣಾ ಉದ್ಯಮಗಳು, ಮಾರಾಟಗಾರರು ಮತ್ತು ರಫ್ತುದಾರರು ಹಾಗೂ ಪರಿಕರ ಉತ್ಪಾದನಾ ಉದ್ಯಮಗಳಿಗೆ ಸಾಲ ಒದಗಿಸುವಂತೆ ಒತ್ತಾಯಿಸಲಾಗುವುದು.

ಮಿಶ್ರ ಬೇಸಾಯ, ಕೃಷಿ ಉಪ ಕಸುಬುಗಳು ಹಾಗೂ ಸಂಬಂಧಿಸಿದ ಎಲ್ಲಾ ಕಾರ್ಯಗಳು ಮತ್ತು ಬೆಳೆ ಉತ್ಪಾದನೆಗಾಗಿ ಸಾವಯವ ರೈತನಿಗೆ/ರೈತರ



ಸಂಘಗಳಿಗೆ/ರೈತರ ಕ್ಲಬ್‌ಗಳಿಗೆ/ರೈತರ ಸಹಕಾರಿ ಸಂಸ್ಥೆಗಳು/ರೈತರ ಕಂಪನಿಗಳು/ಸ್ವ-ಸಹಾಯ ಗುಂಪುಗಳಿಗೆ/ಸರ್ಕಾರೇತರ ಸಂಸ್ಥೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಲದ ದರವನ್ನು ವಿನಾಯಿತಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

## 5.22 ರಫ್ತಿಗೆ ಉತ್ತೇಜನ

ವೈವಿಧ್ಯಮಯವಾದ ಕೃಷಿ ಹವಾಮಾನ ಪರಿಸ್ಥಿತಿ ಹಾಗೂ ಸಾಂಪ್ರದಾಯಿಕ ಕೃಷಿ ಪದ್ಧತಿಗಳು ರೂಢಿಯಲ್ಲಿರುವುದರಿಂದ ನಮ್ಮ ರಾಜ್ಯವು ವಿವಿಧ ಬಗೆಯ ಸಾವಯವ ಉತ್ಪನ್ನಗಳನ್ನು ಉತ್ಪಾದಿಸುವ ಹಾಗೂ ಅವುಗಳನ್ನು ಲಾಭದಾಯಕವಾಗಿ ರಫ್ತು ಮಾಡುವ ಪ್ರಮುಖ ಉತ್ಪಾದನಾ ರಾಜ್ಯವಾಗಬಹುದಾಗಿದೆ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಸಾವಯವ ಕೃಷಿ ಉತ್ಪನ್ನಗಳಿಗೆ ಇರುವ ಸಾಮರ್ಥ್ಯ/ಬೇಡಿಕೆಗೆ ಸಂಬಂಧಿಸಿದ ಮಾಹಿತಿಯನ್ನು ಸರ್ಕಾರದ ವತಿಯಿಂದ ಒದಗಿಸಲಾಗುತ್ತದೆ.

ರಫ್ತು ಮಾಡುವ ಉದ್ದೇಶಕ್ಕೆ ಅಂತರ್‌ರಾಷ್ಟ್ರೀಯ ಪ್ರಮಾಣೀಕರಣಕ್ಕೆ ಅನುಗುಣವಾಗಿ ಸಂಸ್ಕರಣೆ, ಪ್ಯಾಕಿಂಗ್ ಮತ್ತು ಸಂಗ್ರಹಣೆಗಳಿಗಾಗಿ ನೆರವು ಒದಗಿಸಲಾಗುವುದು. ರೈತರ ಸಂಘಗಳು/ರೈತರ ಕ್ಲಬ್‌ಗಳು/ ರೈತರ ಸಹಕಾರಿ ಸಂಸ್ಥೆಗಳಿಗೆ ಸಾಗಾಣಿಕೆಗಾಗಿ ಆರ್ಥಿಕ ನೆರವು ಒದಗಿಸಲಾಗುತ್ತದೆ. ರಫ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಬೆಳೆಗಾರರ ಮತ್ತು ವಿವಿಧ ದೇಶಗಳ ಕೊಳ್ಳುವವರ ಸಮ್ಮೇಳನಕ್ಕೆ ಅನುಕೂಲ ಮಾಡುವುದು.

ರಾಸಾಯನಿಕ ಉಳಿಕೆ ರಹಿತ ಉತ್ಪನ್ನಗಳನ್ನು ದೃಢೀಕರಿಸಲು ಸರ್ಕಾರವು ಸಸ್ಯ ಕೀಟನಾಶಕಗಳ ಉಳಿಕೆ ವಿಶ್ಲೇಷಣೆಯ ಪ್ರಯೋಗಾಲಯಗಳನ್ನು ಸ್ಥಾಪಿಸಲು ನೆರವು ನೀಡುವುದು ಹಾಗೂ ಪರಿಕರಗಳ ಗುಣಮಟ್ಟ ಮತ್ತು ಭದ್ರತೆಗಳನ್ನು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಾನಕಗಳಿಗನುಗುಣವಾಗಿ ಇರುವಂತೆ ನೋಡಿಕೊಳ್ಳಲಾಗುವುದು.

## 5.23 ಸಂಶೋಧನೆ ಮತ್ತು ಅಭಿವೃದ್ಧಿ

ರಾಜ್ಯದ ಎರಡು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ, ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಹಾಗೂ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಕ್ಷೇತ್ರಗಳಲ್ಲಿ ಸಾವಯವ ಕೃಷಿ ಬಗ್ಗೆ ಪರಿಪೂರ್ಣ ಸಂಶೋಧನೆ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತದೆ. ಸಂಶೋಧನೆಯೊಂದಿಗೆ ವಿವಿಧ ಕೃಷಿ ವಲಯಗಳಿಗೆ ಸೂಕ್ತವಾದ ಬೇಸಾಯ ಕ್ರಮಗಳನ್ನು ರೂಪಿಸಲು ಸೂಚಿಸಲಾಗುತ್ತದೆ.

ಸಾವಯವ ಕೃಷಿಗೆ ಸಂಬಂಧಿಸಿದಂತೆ ಸಂಶೋಧನೆ ಕೈಗೊಳ್ಳುವ ರೈತರ ಸಂಘ/ರೈತರ ಒಕ್ಕೂಟ/ರೈತರ ಸಹಕಾರ ಸಂಘ/ರೈತರ ಕಂಪನಿ/ಸ್ವ-ಸಹಾಯ ಗುಂಪು ಮತ್ತು ಸರ್ಕಾರೇತರ ಸಂಸ್ಥೆಗಳನ್ನು ಗುರುತಿಸಿ ಅವುಗಳಿಗೆ ನೆರವು ನೀಡಲಾಗುತ್ತದೆ. ಇದಲ್ಲದೆ ಕೃಷಿ ವಿಶ್ವವಿದ್ಯಾನಿಲಯಗಳು ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ಸಂಶೋಧನೆ ಮತ್ತು ಪಠ್ಯಕ್ರಮಗಳನ್ನು ರೂಪಿಸಲು ಸೂಕ್ತ ಕ್ರಮ ಕೈಗೊಳ್ಳುತ್ತವೆ.

- ಸಾವಯವ ಕೃಷಿ ಬಗ್ಗೆ ಪದವಿ ತರಗತಿಯನ್ನು ಪ್ರಾರಂಭಿಸುವುದು
- ಸ್ನಾತಕ ಮತ್ತು ಸ್ನಾತಕೋತ್ತರ ಹಂತದಲ್ಲಿನ ಪಠ್ಯಕ್ರಮಗಳಲ್ಲಿ ಸಾವಯವ ಕೃಷಿ ಪಠ್ಯಗಳ ಸೇರ್ಪಡೆ
- ಸಾವಯವ ಕೃಷಿಗೆ ಸೂಕ್ತವಾಗಿರುವ ಸ್ಥಳೀಯ ಮತ್ತು

ಸಾಂಪ್ರಾದಾಯಿಕ ತಳಿಗಳನ್ನು ಗುರುತಿಸಲಾಗುವುದು ಮತ್ತು ಅವುಗಳ ಅಭಿವೃದ್ಧಿ, ಸಂರಕ್ಷಣೆಗೆ ವಿಶೇಷ ಒತ್ತು ನೀಡುವುದು

- ಸಾಂಪ್ರದಾಯಿಕ ತಳಿಗಳನ್ನು ಅವುಗಳ ಹೊಂದಾಣಿಕೆಗೆ, ಸಾಮರ್ಥ್ಯಕ್ಕೆ, ಕೀಟ/ರೋಗ ಮತ್ತು ಬರ ನಿರೋಧಕತೆಗೆ ಮೌಲ್ಯಮಾಪನ ಮಾಡಲಾಗುವುದಲ್ಲದೆ ಸಾವಯವ ಕೃಷಿಕರು ಅನುಸರಿಸುತ್ತಿರುವ ಪದ್ಧತಿ/ತಾಂತ್ರಿಕತೆಗಳನ್ನು ದೃಢೀಕರಿಸುವುದು
- ವಿವಿಧ ಬೆಳೆ ಪರಿಸರ ವ್ಯವಸ್ಥೆಯಲ್ಲಿ ಪರಭಕ್ಷಕ/ಪರತಂತ್ರ ಜೀವಿಗಳು, ಜೈವಿಕ ಪೀಡೆ ನಾಶಕಗಳನ್ನು ಗುರುತಿಸಿ ಆಯ್ಕೆ ಮಾಡುವುದು
- ರೈತ/ಪ್ರದೇಶ ನಿಶ್ಚಿತ ಸಂಶೋಧನೆಯನ್ನು ಉತ್ತೇಜಿಸುವುದು
- ಸಾವಯವ ಕೃಷಿ ಉತ್ಪನ್ನಗಳಲ್ಲಿರುವ ಪೋಷಕಾಂಶಗಳ ಸಂಶೋಧನಾ ಮಾಹಿತಿಯನ್ನು ದೃಢೀಕರಿಸುವುದು
- ಸಾವಯುವ ಕೃಷಿಕರು ಹಾಲಿ ಪಾಲಿಸುತ್ತಿರುವ ಬೇಸಾಯ ಪದ್ಧತಿಗಳನ್ನು ಗುರುತಿಸಿ ದಾಖಲು ಮಾಡಲಾಗುವುದು
- ರೈತರ ಮತ್ತು ವಿಸ್ತರಣಾ ಸಿಬ್ಬಂದಿಯವರ ಪ್ರಾತ್ಯಕ್ಷಿಕೆ ಉದ್ದೇಶಕ್ಕಾಗಿ ಕೃಷಿ ವಿಶ್ವವಿದ್ಯಾನಿಲಯಗಳು ಕನಿಷ್ಠ ತಮ್ಮ ಒಂದು ಕೃಷಿ ಕ್ಷೇತ್ರವನ್ನು ಸಂಪೂರ್ಣ ಸಾವಯವ ಕೃಷಿ ಪದ್ಧತಿಗೆ ಪರಿವರ್ತಿಸುವುದು
- ರೋಗ ಮತ್ತು ಪರಾವಲಂಬಿ ಜೀವಿಗಳ ನಿರೋಧಕ ಮತ್ತು ಸ್ಥಳೀಯ ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ಥಳೀಯ ಪಶು ತಳಿಗಳನ್ನು ಗುರುತಿಸಿ, ಆಯ್ಕೆ ಮಾಡಿ ಅಭಿವೃದ್ಧಿಪಡಿಸುವುದು. ಅಲ್ಲದೇ, ರೋಗ ಮತ್ತು ಪರಾವಲಂಬಿ ಜೀವಿಗಳ ನಿಯಂತ್ರಣಕ್ಕಾಗಿ ಗಿಡಮೂಲಿಕೆ ಔಷಧಿಗಳನ್ನು ಗುರುತಿಸಿ ಆಯ್ಕೆ ಮಾಡುವುದು
- ವೇದ ಮತ್ತು ಪುರಾತನ ಗ್ರಂಥಗಳಲ್ಲಿನ ಮಾಹಿತಿಯನ್ನು ದಾಖಲಿಸುವುದು
- ಸಂಶೋಧನಾ ಮನೋಭಾವವುಳ್ಳ ರೈತರೊಂದಿಗೆ ನಿಕಟವಾಗಿ ಸಮಾಲೋಚಿಸುವುದು
- ಆಗಿಂದಾಗ್ಗೆ ಸಂಶೋಧನಾ ಕೆಲಸ ಕಾರ್ಯಗಳನ್ನು ಮೌಲ್ಯಮಾಪನ ಮಾಡುವುದು.

## 5.24 ಔಷಧೀಯ, ಸುಂಗಧ ಮತ್ತು ಬಣ್ಣ ಉತ್ಪಾದನೆಗೆ ಬಳಸುವ ಬೆಳೆಗಳನ್ನು ಅಂತರ ಬೆಳೆಗಳಾಗಿ ಬೆಳೆಯುವುದು:

ರೈತ ಸಂಘುಗಳು/ರೈತರ ಕ್ಲಬ್‌ಗಳು/ ರೈತರ ಸಹಕಾರಿ ಸಂಸ್ಥೆಗಳು/ರೈತರ ಕಂಪನಿಗಳು/ಸ್ವ-ಸಹಾಯ ಗುಂಪುಗಳು/ ಸರ್ಕಾರೇತರ ಸಂಸ್ಥೆಗಳಿಗೆ ಔಷಧೀಯ ಸಸ್ಯ, ಸುಗಂಧ ಮತ್ತು ಬಣ್ಣ ಉತ್ಪಾದನೆಗೆ ಬಳಸುವ ಬೆಳೆಗಳ ಬಿತ್ತನೆ/ಸಸಿಗಳನ್ನು ಪಡೆಯಲು ಮತ್ತು ಕಟಾವಿನ ನಂತರದ ಮತ್ತು ಸಂಸ್ಕರಣೆ ಸೌಲಭ್ಯಗಳಿಗಾಗಿ ಧನಸಹಾಯ ನೀಡಲಾಗುವುದು.

## 5.25 ತರಬೇತಿ, ವಿಸ್ತರಣೆ ಮತ್ತು ಅಧ್ಯಯನ ಪ್ರವಾಸ

ರಾಜ್ಯ ಸರ್ಕಾರದ ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತು ಪಶು ಸಂಗೋಪನೆ ಇಲಾಖೆಗಳ ವತಿಯಲ್ಲಿನ ಕ್ಷೇತ್ರಗಳನ್ನು ಸಾವಯವ ಕೃಷಿಯ ಮಾದರಿ ಕ್ಷೇತ್ರಗಳನ್ನಾಗಿ ಪರಿವರ್ತಿಸಿ, ರೈತರಿಗೆ ಮತ್ತು ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿಗಾಗಿ ಮತ್ತು ಶಿಕ್ಷಣಕ್ಕಾಗಿ ಬಳಸಲಾಗುವುದು.

ಸಾವಯವ ಕೃಷಿಗೆ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಸಾವಯವ ಕೃಷಿ ತತ್ವದ ಬಗ್ಗೆ ಹಾಗೂ ರಾಷ್ಟ್ರೀಯ ಸಾವಯವ ಕೃಷಿ ಮಾನಕಗಳ ಬಗ್ಗೆ ತರಬೇತಿಯನ್ನು ನೀಡಲಾಗುವುದು. ಆಯ್ದ ರೈತರ ಗುಂಪು ಹಾಗೂ ಅದರಲ್ಲೂ ರೈತ ಮಹಿಳೆಯರಿಗೆ ಸಾವಯವ ಕೃಷಿಯ ಪರಿಕಲ್ಪನೆ, ಸಾವಯವ ಮಾನಕಗಳು ಮತ್ತು ಪ್ರಮಾಣೀಕರಣದ ಅಗತ್ಯತೆಯ ಬಗ್ಗೆ ಪ್ರತ್ಯೇಕ ತರಬೇತಿಗಳನ್ನು ರೂಪಿಸಲಾಗುವುದು. ರಾಜ್ಯ/ಇತರೆ ರಾಜ್ಯಗಳಲ್ಲಿನ ಮಾದರಿ ಸಾವಯವ ಕೃಷಿ ಕ್ಷೇತ್ರಗಳಿಗೆ ಇಲಾಖಾ ಅಧಿಕಾರಿಗಳಿಗೆ ಮತ್ತು ರೈತರಿಗೆ ಅದರಲ್ಲೂ ರೈತ ಮಹಿಳೆಯರಿಗೆ ಅಧ್ಯಯನ ಪ್ರವಾಸವನ್ನು ಹಮ್ಮಿಕೊಳ್ಳಲಾಗುವುದು.



ಜೈವಿಕ-ಕ್ರಿಯಾತ್ಮಕ (ಬಯೋ ಡೈನಮಿಕ್) ಬೇಸಾಯ, ಪಂಚಗವ್ಯ ಮತ್ತು ಅಗ್ನಿಹೋತ್ರ ಪದ್ಧತಿಗಳನ್ನು ಪ್ರೋತ್ಸಾಹಿಸಲಾಗುವುದು.

ಅತ್ಯುತ್ತಮ ಸಾವಯವ ಕೃಷಿ ರೈತರನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡಲಾಗುವುದು.

ಪ್ರಾತ್ಯಕ್ಷಿಕೆ ಹಾಗೂ ಇತರೇ ವಿಸ್ತರಣಾ ಕಾರ್ಯಗಳಿಗಾಗಿ ಅಗತ್ಯವಿದ್ದಲ್ಲಿ ಸರ್ಕಾರೇತರ ಸಂಸ್ಥೆಗಳ ಸೇವೆಯನ್ನು ಸೂಕ್ತ ಆರ್ಥಿಕ ಸಹಾಯ ನೀಡುವುದರ ಮೂಲಕ ಬಳಸಿಕೊಳ್ಳಲಾಗುವುದು.

ಬೆಂಗಳೂರು ಸಮೀಪದ ಹುಳಿಮಾವುನಲ್ಲಿನ ಜೈವಿಕ ತಾಂತ್ರಿಕತೆ ಕೇಂದ್ರದಲ್ಲಿ ಸಮುದಾಯ ಬಿತ್ತನೆ ಬೀಜದ ಬ್ಯಾಂಕನ್ನು ಸ್ಥಾಪಿಸಿ ಸ್ಥಳೀಯ/ಸಾಂಪ್ರಾದಾಯಿಕ ತಳಿಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಪ್ರೋತ್ಸಾಹ ನೀಡಲಾಗುತ್ತದೆ.

## 5.26 ಪ್ರಚಾರ ಮತ್ತು ಸಾರ್ವಜನಿಕರಲ್ಲಿ ಜಾಗೃತಿ

ಸಮೂಹ ಮಾಧ್ಯಮಗಳಾದ ದೂರದರ್ಶನ, ಬಾನುಲಿ, ದಿನಪತ್ರಿಕೆ, ಭಿತ್ತಿ ಚಿತ್ರಗಳು, ಹಸ್ತಪ್ರತಿಗಳು, ಯಶೋಗಾಥೆಗಳ ವಿಡಿಯೋ ಚಿತ್ರೀಕರಣ ಮುಂತಾದವುಗಳನ್ನು ಯಶಸ್ವಿಯಾಗಿ ಬಳಸಿಕೊಂಡು ಸಾರ್ವಜನಿಕರಲ್ಲಿ ಅದರಲ್ಲೂ ಮಹಿಳೆಯರಲ್ಲಿ ರಾಸಾಯನಿಕ ಕೃಷಿಯಿಂದಾಗಿ ಪರಿಸರ, ಪ್ರಾಣಿಗಳು ಮತ್ತು ಮನುಷ್ಯರ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಸೂಕ್ತ ತಿಳುವಳಿಕೆಯನ್ನು ನೀಡಲಾಗುವುದು. ಪರಿಸರ ಸ್ನೇಹಿ ಸಾವಯವ ಕೃಷಿಯನ್ನು ಕೈಗೊಳ್ಳುವುದರಿಂದ ಪರಿಸರ ಸಮತೋಲನ ಕಾಯ್ದುಕೊಳ್ಳುವ ಬಗ್ಗೆ ಒತ್ತು ನೀಡಲಾಗುವುದು. ಆಹಾರದಲ್ಲಿ ರಾಸಾಯನಿಕ ಉಳಿಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗುವುದು. ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ಆಹಾರ ಕಲಬೆರಕೆ ನಿರೋಧ ಕಾಯ್ದೆ 1954 ಮತ್ತು ನಿಯಮಾವಳಿ 1955ನ್ನು ತೀವ್ರವಾಗಿ ಜಾರಿಗೆಗೊಳಿಸಲಾಗುವುದು. ರಫ್ತಿನ



ಉದ್ದೇಶಕ್ಕಾಗಿ ಸಿದ್ಧಪಡಿಸುವ ಸಾವಯವ ಕೃಷಿ ಉತ್ಪನ್ನಗಳಿಗೆ ಗುರುತಿನ ಚೀಟಿ (ಲೇಬಲ್) ಅಂಟಿಸುವುದನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಬಗ್ಗೆ ಖಚಿತಪಡಿಸಿಕೊಳ್ಳಲಾಗುವುದು. ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ಸಾವಯವ ತಾರಸಿ ತೋಟ ಮತ್ತು ಕೈತೋಟಗಳನ್ನು ಮಾಡಲು ಪ್ರೋತ್ಸಾಹ ಹಾಗೂ ನೆರವು ನೀಡಲಾಗುವುದು.

## 5.27 ಪ್ರಾಥಮಿಕ/ಮಾಧ್ಯಮಿಕ ಶಿಕ್ಷಣದಲ್ಲಿ ಸಾವಯವ ಕೃಷಿ ಬಗ್ಗೆ ಪಠ್ಯಕ್ರಮ

ಸಾವಯವ ಕೃಷಿ ಪದ್ಧತಿಯಲ್ಲಿ ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಹಾಗೂ ಜೈವಿಕ ವೈವಿಧ್ಯತೆ, ಅರಣ್ಯೀಕರಣ ಮುಂತಾದ ಪಠ್ಯಕ್ರಮಗಳನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಮಟ್ಟದಲ್ಲಿ ತರಲಾಗುವುದು. ಅದರಿಂದಾಗಿ ಮಕ್ಕಳಲ್ಲಿ, ಉಪಾಧ್ಯಾಯರಲ್ಲಿ, ಪೋಷಕ ಮುಂತಾದವರಲ್ಲಿ ರಾಸಾಯನಿಕ ವಸ್ತುಗಳ ರಹಿತ ಬೇಸಾಯ ಪದ್ಧತಿಗಳ ಬಗ್ಗೆ ಮತ್ತು ಪರಿಸರ ಮಾಲಿನ್ಯ ತಡೆ ಮತ್ತು ಆರೋಗ್ಯ ಸುಧಾರಿಸುವ ಬಗ್ಗೆ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಜಾಗೃತಿ ಮೂಡುತ್ತದೆ.

## 5.28 ಸಾವಯವ ಕೃಷಿಕರಿಗೆ ಹೆಚ್ಚಿನ ಆದ್ಯತೆ

ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಫಲಾನುಭವಿಗಳನ್ನು ಆರಿಸುವಾಗ ಸಾವಯವ ಕೃಷಿಕರಿಗೆ ಆದ್ಯತೆ ನೀಡಲಾಗುವುದು.

## 5.29 ಮಕ್ಕಳಿಗೆ ಸುರಕ್ಷಿತ ಆಹಾರ

ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಇರುವುದರಿಂದಲೂ ಮತ್ತು ಅವರ ದೇಹದಿಂದ ಕಲ್ಮಶಗಳನ್ನು ಹೊರಹಾಕುವ ವ್ಯವಸ್ಥೆ ಇನ್ನೂ ಅಭಿವೃದ್ಧಿ ಹೊಂದದೆ ಇರುವುದರಿಂದ ಮಕ್ಕಳು ವಯಸ್ಕರಿಗಿಂತ ಆಹಾರದಲ್ಲಿನ ರಾಸಾಯನಿಕ ಉಳಿಕೆಗಳಿಂದ ಹೆಚ್ಚಿನ ತೊಂದರೆಗೆ ಒಳಪಡುತ್ತಾರೆ. ಇದನ್ನರಿತ ಹಲವು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮಕ್ಕಳಿಗೆ ಸಾವಯವ ಆಹಾರವನ್ನು ನೀಡುವ ನೀತಿಯನ್ನು ಹೊರತರುತ್ತಿದ್ದಾರೆ. ಈ ಉತ್ಪನ್ನಗಳನ್ನೊಳಗೊಂಡ ಮಕ್ಕಳ ಆಹಾರ ತಯಾರಿಕಾ ಉದ್ದಿಮೆ ಅಭಿವೃದ್ಧಿ ಹೊಂದಿದ ದೇಶದಲ್ಲಿ ಗಣನೀಯ ಪ್ರಮಾಣದಲ್ಲಿ ಬೆಳೆದಿರುತ್ತದೆ. ರಾಜ್ಯ ಸರ್ಕಾರವು ಶಿಶು ಆಹಾರ ಉತ್ಪಾದನಾ ಉದ್ದಿಮೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ಉತ್ಪನ್ನಗಳನ್ನು ಬಳಸಲು ಪ್ರೋತ್ಸಾಹಿಸುತ್ತದೆ. ಶಿಶು ಆಹಾರ ಉತ್ಪಾದಕರು ಹಾಗೂ ರೈತರ ಸಂಘಗಳು/ರೈತರ ಕೂಟ/ರೈತರ ಸಹಕಾರ ಸಂಘಗಳು/ರೈತರ ಕಂಪನಿಗಳು/ಸ್ವ-ಸಹಾಯ ಸಂಘಗಳು/ಸರ್ಕಾರೇತರ ಸಂಸ್ಥೆಗಳ ನಡುವೆ ಒಪ್ಪಂದ ಕೃಷಿ ವ್ಯವಸ್ಥೆ ಏರ್ಪಡಿಕೆಗೆ ಸೂಕ್ತ ವ್ಯವಸ್ಥೆ ಮಾಡಲಾಗುವುದು.

## 5.30 ಪರಿಸರ ಪ್ರವಾಸೋದ್ಯಮ

ವಿಶ್ವದಾದ್ಯಂತ ಪರಿಸರ ಸ್ನೇಹಿ ಪ್ರವಾಸೋದ್ಯಮ ಬೆಳೆಯುತ್ತಿದೆ. ಸ್ಥಳೀಯ ಜೀವನ ಶೈಲಿ ಕಾಪಾಡುತ್ತಾ ಅದನ್ನೇ ರೈತರ ಆರ್ಥಿಕ ಅಭಿವೃದ್ಧಿಯ ಸಾಧನವನ್ನಾಗಿ ಮಾಡುವುದು ಇದರ ಉದ್ದೇಶವಾಗಿದೆ. ರೈತರಲ್ಲಿನ ಸಾಂಪ್ರದಾಯಿಕ ಕೃಷಿ ಪದ್ಧತಿಗಳು, ಅಲ್ಲಿಯ ಪರಿಸರ, ಆತಿಥ್ಯ ಮೊದಲಾದವುಗಳು ದೇಶೀಯ, ವಿದೇಶೀಯ ಪ್ರವಾಸಿಗರನ್ನು ಆಕರ್ಷಿಸುತ್ತವೆ ಹಾಗೂ ಇದರಿಂದ ಸ್ಥಳೀಯ ಉತ್ಪಾದನೆಯೊಂದಿಗೆ ಉತ್ತಮ ಮಾರುಕಟ್ಟೆ ದೊರೆಯುವುದು. ಪರಿಶುದ್ಧ ಹವೆ, ನೀರು, ಆಹಾರವನ್ನು ಒದಗಿಸುವ ಸಾವಯವ ಕೃಷಿ ಗ್ರಾಮಗಳು, ಪರಿಸರ ಸ್ನೇಹಿ ಪ್ರವಾಸಿಗರ ನೆಚ್ಚಿನ ತಾಣಗಳಾಗುತ್ತವೆ. ಸರ್ಕಾರವು ಇದಕ್ಕಾಗಿ ನೆರವು ಮತ್ತು ಪ್ರೋತ್ಸಾಹ ನೀಡುವುದಲ್ಲದೆ ಪ್ರಚಾರ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ಮಾಡುವುದು.

## 5.31 ರಾಸಾಯನಿಕ ಗೊಬ್ಬರ/ಪೀಡೆ ನಾಶಕ ಮುಕ್ತ ವಲಯಗಳು

ರಾಜ್ಯದಲ್ಲಿ ಸೂಕ್ಷ್ಮ ಪರಿಸರದ, ಸಮೃದ್ಧ ಜೀವ ಸಂಕುಲವಿರುವ ಸ್ಥಳಗಳಿವೆ ಹಾಗೂ ನೈಸರ್ಗಿಕ ಸಂಪನ್ಮೂಲಗಳಿವೆ. ಇವನ್ನು ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳ ಉಳಿಕೆಗಳಿಂದ ರಕ್ಷಿಸಬೇಕಾಗಿದೆ. ರಾಜ್ಯದಲ್ಲಿ ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ಬಳಸುವ ಪ್ರದೇಶಗಳು ಸಹ ಇವೆ. ಇಂತಹ ಪ್ರದೇಶಗಳನ್ನು ಗುರುತಿಸಿ ಅವುಗಳನ್ನು "ರಾಸಾಯನಿಕ ಗೊಬ್ಬರ/ಕ್ರಿಮಿನಾಶಕ ಮುಕ್ತ ವಲಯಗಳೆಂದು" ಘೋಷಿಸಲಾಗುವುದು.

## 5.32 ವಿವಿಧ ಕಾರ್ಯಕ್ರಮಗಳಿಗೆ ನೀಡುವ ನೆರವಿನ ಪ್ರಮಾಣ

ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿ (ಎಂಪವರ್ಡ್ ಕಮಿಟಿ) ಸಾವಯವ ಕೃಷಿ ಕಾರ್ಯ ನಿರ್ವಹಣಾ ಸಮಿತಿಯ ಜೊತೆ ಸಮಾಲೋಚಿಸಿ ಸಾವಯವ ಕೃಷಿ ನೀತಿಯಲ್ಲಿನ ಕಾರ್ಯಸೂಚಿಯಂತೆ ಮಾರ್ಗದರ್ಶಕ ಸೂತ್ರಗಳನ್ನು ರೂಪಿಸುವುದು ಹಾಗೂ ಸಾವಯವ ಕೃಷಿಗೆ ಉತ್ತೇಜನ ನೀಡಲು ಸಹಾಯ, ರಿಯಾಯಿತಿಗಳ ಬಗ್ಗೆ ನಿರ್ಧರಿಸುವುದು.

## ಅನುಬಂಧ I

ಸಾವಯವ ಕೃಷಿ ಉತ್ತೇಜನಕ್ಕಾಗಿ ರಾಜ್ಯಮಟ್ಟದ ಅಧಿಕಾರಯುಕ್ತ (ಎಂಪವರ್ಡ್) ಸಮಿತಿಯ ಕೆಲಸ ಕಾರ್ಯಗಳು ಮತ್ತು ಜವಾಬ್ದಾರಿಗಳು.

- ರಾಜ್ಯ ಸರ್ಕಾರ ರೂಪಿಸಿರುವ ಸಾವಯವ ಕೃಷಿ ನೀತಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಿನಿಮಿಷನ್ ಸಲಹೆಗಳನ್ನು ಪಡೆದು ಆಗಿದಾಂಗ್ಗೆ ಪರಾಮರ್ಶಿಸುವುದು.
- ಸಾವಯವ ಕೃಷಿ ಪ್ರೋತ್ಸಾಹದಲ್ಲಿ ನಿರತರಾಗಿರುವ ವಿವಿಧ ಇಲಾಖೆಗಳ/ವಿಭಾಗಗಳ ಮತ್ತು ಸಂಸ್ಥೆಗಳ ನಡುವೆ ಸಹಯೋಗ ಸಾಧಿಸುವುದು.
- ಸಾವಯುವ ಕೃಷಿ ಉತ್ತೇಜನಕ್ಕಾಗಿ ರೂಪಿಸಿರುವ ಮಾರ್ಗಸೂಚಿಗಳಿಗೆ ಮತ್ತು ಯೋಜನೆಗಳಿಗೆ ಒಪ್ಪಿಗೆ ನೀಡುವುದು.
- ಸಾವಯವ ಕೃಷಿಯ ವಿವಿಧ ಘಟಕಗಳಿಗೆ ನೆರವಿನ ಮಟ್ಟ ಮತ್ತು ರಿಯಾಯಿತಿಗಳನ್ನು ನಿಗದಿಗೊಳಿಸುವುದು.
- ಸಾವಯುವ ಕೃಷಿಗೆ ಸಂಬಂಧಪಟ್ಟಂತೆ ಅಗತ್ಯವಿದ್ದಲ್ಲಿ ಕಾಯ್ದೆಗಳನ್ನು ರೂಪಿಸುವುದು.
- ಸಾವಯವ ಕೃಷಿಗೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳ ಬಗ್ಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಹಯೋಗ ಸಾಧಿಸುವುದು.
- ಕೇಂದ್ರಿಕೃತ ಕಾರ್ಯಕ್ಕಾಗಿ ಉಪಸಮಿತಿಗಳು/ಸ್ಥಳ ನಿಶ್ಚಿತ ಸಮಿತಿಗಳನ್ನು ರಚಿಸುವುದು.
- ಸ್ಥಳ ನಿಶ್ಚಿತ ಸಮಿತಿಗಳಿಗೆ ಮಾರ್ಗದರ್ಶನ ಮತ್ತು ಸೂಚನೆಗಳನ್ನು ನೀಡುವುದು.
- ರಾಜ್ಯ ಸರ್ಕಾರದ ಸಾವಯವ ಕೃಷಿ ನೀತಿಯನ್ವಯ ವಿವಿಧ ಸಂಸ್ಥೆಗಳು ಅನುಷ್ಠಾನಗೊಳಿಸಿದ ಸಾವಯುವ ಕೃಷಿ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸುವುದು.
- ಸಾವಯುವ ಕೃಷಿ ಉತ್ತೇಜನಕ್ಕೆ ಸಂಬಂಧಿಸಿದ ಇನ್ನಾವುದಾದರೂ ವಿಷಯಗಳ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದು.
- ಸಮಿತಿಯು ಕನಿಷ್ಠ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರುವುದು.

## ಅನುಬಂಧ II

ಸಾವಯುವ ಕೃಷಿ ಕಾರ್ಯನಿರ್ವಹಣಾ ಸಮಿತಿಯ ಕೆಲಸ ಕಾರ್ಯಗಳು ಮತ್ತು ಜವಾಬ್ದಾರಿಗಳು:

- ರಾಜ್ಯದಲ್ಲಿ ಸಾವಯುವ ಕೃಷಿ ಉತ್ತೇಜನಕ್ಕೆ ಕಾರ್ಯವಾಹಿ ಮಾರ್ಗಸೂಚಿಗಳನ್ನು ರೂಪಿಸುವುದು.
- ವಿವಿಧ ಯೋಜನೆಗಳನ್ನು ಪರಿಶೀಲಿಸಿ, ಆಯ್ಕೆ ಮಾಡಿ ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯ ಗಮನಕ್ಕೆ ತರುವುದು.
- ಅನುದಾನದ ಹಂಚಿಕೆಯೊಂದಿಗೆ ವಾರ್ಷಿಕ ಯೋಜನೆ ಮತ್ತು ಕ್ರಿಯಾ ಯೋಜನೆಗಳ ವಿವಿಧ ಕಾರ್ಯಗಳನ್ನು ರೂಪಿಸಿ, ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿಯ ಅನುಮೋದನೆಗೆ ಸಲ್ಲಿಸುವುದು.
- ಸಾವಯುವ ಕೃಷಿ ಉತ್ತೇಜನಕ್ಕೆ ಸಂಬಂಧಿಸಿದಂತೆ ವಿವಿಧ ಘಟಕಗಳಿಗೆ ರಿಯಾಯಿತಿ/ನೆರವುಗಳ ಬಗ್ಗೆ ಸಲಹೆ ನೀಡುವುದು.
- ಸಾವಯವ ಕೃಷಿ ಪರಿಕರಗಳ ಉತ್ಪಾದನೆ ಮತ್ತು ಮಾರಾಟಕ್ಕೆ ಸಂಬಂಧಪಟ್ಟಂತೆ ಗುಣ ನಿಯಂತ್ರಣ ಮಾರ್ಗಸೂಚಿಯನ್ನು ರೂಪಿಸುವುದು ಮತ್ತು ಸಾವಯವ ಉತ್ಪನ್ನಗಳಲ್ಲಿನ ಪೀಡೆ ನಾಶಕಗಳ ಉಳಿಕೆ, ನೈಟ್ರೇಟ್ ಅಂಶ ಮತ್ತು ಭಾರ ಲೋಹಗಳನ್ನು ಪತ್ತೆ ಹಚ್ಚಲು ಗುಣ ನಿಯಂತ್ರಣ ಪ್ರಯೋಗಾಲಯಗಳ ಸ್ಥಾಪನೆ ಬಗ್ಗೆ ಕ್ರಮ ಕೈಗೊಳುವುದು.
- ರಾಜ್ಯದಲ್ಲಿ ಸಾವಯವ ಕೃಷಿ ಉತ್ತೇಜನಕ್ಕಾಗಿ ಸರ್ಕಾರೇತರ ಸಂಸ್ಥೆಗಳೊಂದಿಗೆ, ರೈತರ ಸಂಸ್ಥೆಗಳೊಂದಿಗೆ, ಸಂಸ್ಕರಣಾ ಉದ್ದಿಮೆಗಳೊಂದಿಗೆ, ಮಾರಾಟ ಸಂಸ್ಥೆಗಳೊಂದಿಗೆ, ರಫ್ತು ಸಂಸ್ಥೆಗಳೊಂದಿಗೆ ಮತ್ತು ಪ್ರಮಾಣೀಕರಿಸುವ ಸಂಸ್ಥೆಗಳೊಂದಿಗೆ ಸಹಯೋಗ ಸಾಧಿಸುವುದು.
- ಸಾವಯುವ ಕೃಷಿಗೆ ಸಂಬಂಧಪಟ್ಟಂತೆ ತಾಂತ್ರಿಕತೆಯ ವರ್ಗಾವಣೆ, ಸಾವಯವ ಪ್ರಮಾಣೀಕರಣ, ಪರಿಕರಗಳ ಗುಣನಿಯಂತ್ರಣ ಮತ್ತು ಸಂಬಂಧಪಟ್ಟ ವಿಷಯಗಳ ಬಗ್ಗೆ ಕಾರ್ಯ ಯೋಜನೆಯನ್ನು ರೂಪಿಸುವುದು.
- ಸಾವಯುವ ಕೃಷಿ ಉತ್ತೇಜನಕ್ಕಾಗಿ ರಾಜ್ಯಮಟ್ಟದ ಅಧಿಕಾರಯುಕ್ತ ಸಮಿತಿ ಆಗಿಂದಾಗ್ಗೆ ವಹಿಸುವ ಬೇರೆ ಇನ್ನಾವುದೇ ಕಾರ್ಯವನ್ನು ನಿರ್ವಹಿಸುವುದು.
- ಸಮಿತಿಯು ಕನಿಷ್ಠ ಎರಡು ತಿಂಗಳಿಗೊಮ್ಮೆಯಾದರೂ ಸಭೆ ಸೇರುವುದು.

*(2ನೇ ರಕ್ಷಾ ಪುಟದಿಂದ)*

## ಕರ್ನಾಟಕದಲ್ಲಿ ಕೃಷಿ - ಒಂದು ನೋಟ

- ☆ ಕರ್ನಾಟಕ ರಾಜ್ಯ ಜೈವಿಕ ವೈವಿಧ್ಯತೆಯ ಶ್ರೀಮಂತ ರಾಜ್ಯ
- ☆ ಕಲೆ ಮತ್ತು ಸಂಸ್ಕೃತಿಯ ಮೂರ್ತ ರೂಪ
- ☆ ಖನಿಜ ಮತ್ತು ಭೂ ಸಂಪನ್ಮೂಲಗಳ ಶ್ರೀಮಂತಿಕೆಯನ್ನು ಹೊಂದಿದ ರಾಜ್ಯ
- ☆ ವೈವಿಧ್ಯತೆಯಿಂದ ಕೂಡಿದ ಕಪ್ಪು, ಕೆಂಪು, ಜಂಬಿಟ್ಟಿಗೆ, ಮೆಕ್ಕಲು, ಕರಾವಳಿ ಮಣ್ಣು
- ☆ ಕರ್ನಾಟಕವು ಭಾರತದ ದಕ್ಷಿಣ ಡೆಕ್ಕನ್ ಪ್ರಸ್ಥಭೂಮಿಯಲ್ಲಿದ್ದು ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಅರಬ್ಬೀ ಸಮುದ್ರದಿಂದ ಸುತ್ತುವರೆದಿದೆ. **ಅಕ್ಷಾಂಶ** : 11°, 30' ಮತ್ತು 18° 30' ಉತ್ತರ

  **ರೇಖಾಂಶ** : 74° 15' ಮತ್ತು 78° 30 ಪೂರ್ವ

### ವಿವಿಧ ಭೌತಿಕ ವಿಭಾಗಗಳು

- ☆ ಡೆಕ್ಕನ್ ಪ್ರಸ್ಥಭೂಮಿ, ಗುಡ್ಡಗಾಡು ಮತ್ತು ಕರಾವಳಿ ತೀರ
- ☆ ವೈವಿಧ್ಯಮಯ ಹವಾಮಾನ ಪರಿಸ್ಥಿತಿ: ವಾರ್ಷಿಕ ಸರಾಸರಿ ಉಷ್ಣಾಂಶ 20.3°C ರಿಂದ 27.6° C, ವಾರ್ಷಿಕ ಮಳೆ 500 ರಿಂದ 4,000 ಮಿ.ಮೀ. ಮತ್ತು ವಾರ್ಷಿಕ ಸರಾಸರಿ ಮಳೆ 1,139 ಮಿ.ಮೀ.

### ಮಳೆ ಹಂಚಿಕೆ

ನೈರುತ್ಯ ಮಳೆ ಮಾರುತ (ಮುಂಗಾರು)-805 ಮಿ.ಮೀ., ಈಶಾನ್ಯ ಮಳೆ ಮಾರುತ (ಹಿಂಗಾರು)-195 ಮಿ.ಮೀ., ಮಳೆ ಮಾರುತ ಪೂರ್ವ-125 ಮಿ.ಮೀ., ಮಳೆ ಮಾರುತದ ಉತ್ತರ (ಬೇಸಿಗೆ)-14 ಮಿ.ಮೀ.

### ಕರ್ನಾಟಕ ರಾಜ್ಯದ 10 ಕೃಷಿ ವಲಯಗಳು

ಈಶಾನ್ಯ ಅರೆಮಲೆನಾಡು ವಲಯ

ಈಶಾನ್ಯ ಒಣ ವಲಯ

ಉತ್ತರ ಒಣ ವಲಯ

ಮಧ್ಯ ಒಣ ವಲಯ

ಪೂರ್ವ ಒಣ ವಲಯ

ದಕ್ಷಿಣ ಮಲೆನಾಡು ವಲಯ

ಉತ್ತರ ಅರೆಮಲೆನಾಡು ವಲಯ

ಕರಾವಳಿ ವಲಯ

### ಕೃಷಿ ವಸ್ತು ಸ್ಥಿತಿ

| | | |
|---|---|---|
| ಮುಂಗಾರು ಸಾಮಾನ್ಯ ವಿಸ್ತೀರ್ಣ | - | 6.81 ದಶಲಕ್ಷ ಹೆ. |
| ಹಿಂಗಾರು ಸಾಮಾನ್ಯ ವಿಸ್ತೀರ್ಣ | - | 3.19 ದಶಲಕ್ಷ ಹೆ. |
| ಬೇಸಿಗೆ ಸಾಮಾನ್ಯ ವಿಸ್ತೀರ್ಣ | - | 0.62 ದಶಲಕ್ಷ ಹೆ. |
| ಅರಣ್ಯ ಪ್ರದೇಶ | - | 3.06 ದಶಲಕ್ಷ ಹೆ. |

- ☆ ಕರ್ನಾಟಕ 53 ದಶಲಕ್ಷ ಜನಸಂಖ್ಯೆಯನ್ನು ಹೊಂದಿದ್ದು, ರಾಷ್ಟ್ರದಲ್ಲಿ ಹೆಚ್ಚು ಜನಸಂಖ್ಯೆ ಹೊಂದಿದ 9ನೇ ರಾಜ್ಯ. ಇದರಲ್ಲಿ ಶೇ. 66 ಗ್ರಾಮೀಣ ಪ್ರದೇಶಗಳಲ್ಲಿ ವಾಸವಿದ್ದು, ಅವರಲ್ಲಿ ಶೇ 73ರಷ್ಟು ಜನರು ಕೃಷಿ ಅವಲಂಬಿತರು.

### ಪ್ರಮುಖ ಬೆಳೆಗಳು

- ☆ ಜೋಳ, ಭತ್ತ, ರಾಗಿ, ಮು.ಜೋಳ, ಸಜ್ಜೆ, ತೊಗರಿ, ಕಡಲೆ, ಹೆಸರು, ಹುರುಳಿ, ನೆಲಗಡಲೆ, ಸೂರ್ಯಕಾಂತಿ, ಕಬ್ಬು, ಹತ್ತಿ, ಹೊಗೆಸೊಪ್ಪು
- ☆ ರಾಷ್ಟ್ರದ ಆಹಾರ ಉತ್ಪಾದನೆಗೆ ರಾಜ್ಯದ ಕೊಡುಗೆ ಶೇ. 5
- ☆ ಜಲಾನಯನ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನದಲ್ಲಿ ಕರ್ನಾಟಕ ರಾಜ್ಯ ಮೊದಲನೆಯದು.
- ☆ 1995ರಲ್ಲಿ ಕರ್ನಾಟಕ ರಾಜ್ಯವು ಕರ್ನಾಟಕ ಕೃಷಿ ನೀತಿಯನ್ನು ರೂಪಿಸಿರುತ್ತದೆ.

### ತೋಟಗಾರಿಕೆ

- ☆ ಕರ್ನಾಟಕ ರಾಜ್ಯವು ತೋಟಗಾರಿಕಾ ಬೆಳೆಗಳ ಉತ್ಪಾದನೆಗೆ ಪ್ರಸಿದ್ಧಿ ಪಡೆದಿದೆ.
- ☆ ನಿವ್ವಳ ಬಿತ್ತನೆ ಪ್ರದೇಶದ ಶೇ. 15 (15.6 ಲಕ್ಷ ಹೆ.) ರಷ್ಟು ತೋಟಗಾರಿಕಾ ಬೆಳೆಗಳಿಂದ ಆವರಿಸಿದೆ. ಹಲವಾರು ಹಣ್ಣು, ತರಕಾರಿ, ಸಾಂಬಾರು, ಉದ್ಯಾನ/ನೆಡುತೋಪು, ವಾಣಿಜ್ಯ ಹೂಗಳು ಹಾಗೂ ಗಿಡಮೂಲಿಕೆಗಳನ್ನು ರಾಜ್ಯದಲ್ಲಿ ಬೆಳೆಯುತ್ತಿದ್ದು ಒಟ್ಟು ಉತ್ಪಾದನೆ 103.93 ಲಕ್ಷ ಟನ್.

### ರೇಷ್ಮೆ

- ☆ ಕರ್ನಾಟಕ ರಾಜ್ಯವು ಹಿಪ್ಪು ನೇರಳೆ ಮತ್ತು ರೇಷ್ಮೆ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ.

### ಪಶು ಸಂಗೋಪನೆ

- ☆ ಕರ್ನಾಟಕ ರಾಜ್ಯವು ಹಾಲು ಉತ್ಪಾದನೆಯಲ್ಲಿ ರಾಷ್ಟ್ರದಲ್ಲಿ 5ನೇ ಸ್ಥಾನದಲ್ಲಿಯೂ ಮತ್ತು ದಕ್ಷಿಣ ಭಾರತದಲ್ಲಿ ಅಗ್ರಸ್ಥಾನದಲ್ಲಿದೆ.
- ☆ ಒಟ್ಟು ಹಾಲು ಉತ್ಪಾದನೆ ದಿನಂ ಪ್ರತಿ 4,540 ಟನ್‌ಗಳು


### ಮೀನುಗಾರಿಕೆ

- ☆ ಕರ್ನಾಟಕ ರಾಜ್ಯವು 350 ಕಿ.ಮೀ. ಕರಾವಳಿ ತೀರ ಪ್ರದೇಶವನ್ನು ಹೊಂದಿದೆ.
- ☆ ಮೀನು ಉತ್ಪಾದನೆ: ಸಮುದ್ರ-1.6 ಲಕ್ಷ ಟನ್ ಮತ್ತು ಒಳನಾಡು-1.8 ಲಕ್ಷ ಟನ್

### ಸಂಶೋಧನಾ ಸಂಸ್ಥೆಗಳು

- ☆ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಧಾರವಾಡ
- ☆ ಕರ್ನಾಟಕ ಪಶು, ಪ್ರಾಣಿ, ಮೀನುಗಾರಿಕೆ ವಿಜ್ಞಾನಗಳು ವಿಶ್ವವಿದ್ಯಾನಿಲಯ, ಬೀದರ್
- ☆ ಭಾರತೀಯ ತೋಟಗಾರಿಕಾ ಸಂಶೋಧನಾ ಕೇಂದ್ರ, ಹೆಸರುಘಟ್ಟ, ಬೆಂಗಳೂರು
- ☆ ಪ್ರಾಯೋಜಿತ ಜೈವಿಕ ನಿಯಂತ್ರಣ ನಿರ್ದೇಶನಾಲಯ, ಬೆಂಗಳೂರು.
- ☆ ಪ್ರಾದೇಶಿಕ ಸಾವಯವ ಕೃಷಿ ಕೇಂದ್ರ, ಬೆಂಗಳೂರು.
- ☆ ಕೇಂದ್ರಿಯ ಸಮಗ್ರ ಪೀಡೆ ನಿರ್ವಹಣೆ ಕೇಂದ್ರ, ಬೆಂಗಳೂರು
- ☆ ಕೇಂದ್ರಿಯ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ, ಮೈಸೂರು
- ☆ ಪಶು ಪೋಷಕಾಂಶ ಮತ್ತು ಶರೀರ ಕ್ರಿಯಾ ಶಾಸ್ತ್ರ ಸಂಸ್ಥೆ, ಬೆಂಗಳೂರು
- ☆ ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು
- ☆ ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು
- ☆ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ, ಮೈಸೂರು
- ☆ ರಾಷ್ಟ್ರೀಯ ಪಶು ಆಹಾರ ಮತ್ತು ಜೈವಿಕ ವೈದ್ಯಕೀಯ ಸಂಸ್ಥೆ, ಬೆಂಗಳೂರು
- ☆ ರಾಷ್ಟ್ರೀಯ ಹೈನುಗಾರಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರು
- ☆ ಸಸ್ಯ ನೈರ್ಮಲ್ಯ ಕೇಂದ್ರ, ಬೆಂಗಳೂರು.

ಕರ್ನಾಟಕ....



.... ರೈತರ
ಶ್ರೇಯೋಭಿವೃದ್ಧಿಯ
ಹರಿಕಾರ

www.raitamitra.kar.nic.in

ಸಾವಯವ ಕೃಷಿ ಘಟಕ
ಕೃಷಿ ಆಯುಕ್ತರ ಕಾರ್ಯಾಲಯ
ನಂ.1, ಶೇಷಾದ್ರಿರಸ್ತೆ, ಬೆಂಗಳೂರು-560 001.
ದೂರವಾಣಿ: 91 80 22212804 ಫ್ಯಾಕ್ಸ್: 91 80 22212688
email: agriorganic@mail.kar.nic.in

Print: Jwalamukhi Job Press, B'lore-4, Ph: 080-26601064